

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸ ಪತ್ರಿಕೆ

# Karnataka Scout & Guide
Monthly Magazine


Vol -66 | Issue-10 | October 2025 | Pages: 32 | Annual Subscription: ₹ 200/-

ಸಂಪುಟ: 66 | ಸಂಚಿಕೆ: 10 | ಅಕ್ಟೋಬರ್ 2025 | ಪುಟಗಳು: 32 | ವಾರ್ಷಿಕ ಚಂದ ರೂ. 200/-


## ೭೦ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು



ಅಕ್ಟೋಬರ್ 9 ರಿಂದ 23, 2025ರ ವರೆಗೆ ಹಾಸನದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿದ
ಶ್ರೀ ಹಾಸನಾಂಬ ದರ್ಶನ ಮತ್ತು ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ
ರಾಜ್ಯ ಸಂಸ್ಥೆ ಮತ್ತು ಹಾಸನ ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ
ರಾಜ್ಯ ಮಟ್ಟದ ರೋವರ್ ಮತ್ತು ರೇಂಜರ್ ಸೇವಾ ಶಿಬಿರದಲ್ಲಿ ಭಾಗವಹಿಸಿದ ರೇಂಜರ್‌ಗಳು

ಅಕ್ಟೋಬರ್ 9 ರಿಂದ 23 ರ ವರೆಗೆ ಹಾಸನದಲ್ಲಿ ಜರುಗಿದ ಶ್ರೀ ಹಾಸನಾಂಬ ದರ್ಶನ ಮತ್ತು ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ರಾಜ್ಯ ಸಂಸ್ಥೆ ಮತ್ತು ಹಾಸನ ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಿದ ರಾಜ್ಯ ಮಟ್ಟದ ರೋವರ್ ಮತ್ತು ರೇಂಜರ್ ಸೇವಾ ಶಿಬಿರದಲ್ಲಿ ಭಾಗವಹಿಸಿದ ರೋವರ್‌ಗಳು.





ಅಕ್ಟೋಬರ್ 17 ರಂದು ಕೊಡಗು ಜಿಲ್ಲೆ ತಲಕಾವೇರಿಯಲ್ಲಿ ಪ್ರತೀ ವರ್ಷದಂತೆ ಶ್ರೀ ಕಾವೇರಿ ಮಾತೆಯ ತೀರ್ಥೋದ್ಭವ ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ಸ್ಕೌಟರ್-ಗೈಡರ್, ರೋವರ್-ರೇಂಜರ್‌ಗಳು ಭಾಗವಹಿಸಿ ಸೇವೆಯನ್ನು ಸಲ್ಲಿಸಿದರು.

ಅಕ್ಟೋಬರ್ 18 ರಿಂದ 23ರ ವರೆಗೆ ಚಾಮರಾಜನಗರ ಜಿಲ್ಲೆ ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವ ಪ್ರಯುಕ್ತ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಿದ ಸೇವಾ ಶಿಬಿರದಲ್ಲಿ ಭಾಗವಹಿಸಿದ್ದ ರೋವರ್-ರೇಂಜರ್‌ಗಳಿಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಶುಭ ಹಾರೈಸಿದರು.



# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 66 Issue: 10 October 2025



**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಉಪಾಧ್ಯಕ್ಷರು**

ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ಮುಕ್ತಾ ಬಿ. ಕಾಗಲಿ



ಸಂಚಿಕೆಯ ವಾರ್ಷಿಕ ಚಂದಾ ರೂ. 200/-

ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ

ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು

ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ

ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ

#39, ಅರಮನೆ ರಸ್ತೆ, ಬೆಂಗಳೂರು - 560 001

ಇಲ್ಲಿಗೆ ಕಳುಹಿಸಲು ಕೋರಿದೆ.


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ನವೆಂಬರ್ 2025ರ ಕಾರ್ಯಕ್ರಮ ಮತ್ತು ಚಟುವಟಿಕೆಗಳು ...06

ಸಂಪಾದಕೀಯ ...07

ಶ್ರೀ ಹಾಸನಾಂಬ ದರ್ಶನ ಮತ್ತು ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ರೋವರ್ ಮತ್ತು ರೇಂಜರ್‌ಗಳ ಸೇವೆ ...08

YUVA Aapda Mitra Training Camp 2025 ...10

ರೊಬೊಟಿಕ್ಸ್, ಕೃತಿಕ ಬುದ್ಧಿಮತ್ತೆ ಯುವ ಉದ್ಯಮಶೀಲತೆ ಹಾಗೂ ಸ್ಟೆಮ್ ವಿಷಯಗಳನ್ನೊಳಗೊಂಡ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ...12

ರಾಜ್ಯ ಸಂಸ್ಥೆಗೆ ರಾಷ್ಟ್ರೀಯ ಮಟ್ಟದ 'ಮೆಸೆಂಜರ್ ಆಫ್ ಪೀಸ್ ಸ್ಟಾರ್ ಪ್ರಶಸ್ತಿ 2023' ...13

Jota-Joti Jamboree on the Air / Jamboree on the Internet ...15

CONGRATULATIONS ...16

ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಅಕ್ಟೋಬರ್ 2025ರಲ್ಲಿ ನಿರ್ವಹಿಸಲ್ಪಟ್ಟ ಮುಖ್ಯ ಕಾರ್ಯಚಟುವಟಿಕೆಗಳು ...17

ಜಿಲ್ಲಾ ವಾರ್ತೆಗಳು ...20

ಶ್ರದ್ಧಾಂಜಲಿ ...30


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು,**

ನಮ್ಮ ನಾಡಿನ ಹೆಮ್ಮೆಯ ದಿನ, ನವೆಂಬರ್ 01 ಕನ್ನಡ ರಾಜ್ಯೋತ್ಸವ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಹಾಗೂ ಇತ್ತೀಚೆಗೆ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿರುವ ಕನ್ನಡ ಬಾಷೆ, ನಮ್ಮೆಲ್ಲರ ಹೆಮ್ಮೆ ಮತ್ತು ಗೌರವದ ಸಂಕೇತವಾಗಿದೆ. ಈ ಹಬ್ಬದ ಸಂಭ್ರಮವನ್ನು ನಾವೆಲ್ಲರೂ ಅಭಿಮಾನದಿಂದ, ಉತ್ಸಾಹದಿಂದ ಮತ್ತು ಏಕತೆಯ ಮನೋಭಾವದಿಂದ ಆಚರಿಸೋಣ.

2025ರ ಅಕ್ಟೋಬರ್ ತಿಂಗಳು ನಮ್ಮ ಸಂಸ್ಥೆಯಲ್ಲಿ ಚಟುವಟಿಕೆಗಳಿಂದ ತುಂಬಿದ ಉತ್ಸಾಹದ ಮಾಸವಾಗಿದ್ದು, ಅನೇಕ ಸ್ಮರಣೀಯ ಕ್ಷಣಗಳನ್ನು ನೀಡಿದೆ. ಈ ತಿಂಗಳಲ್ಲಿ ನಡೆದ ಹಲವು ಕಾರ್ಯಕ್ರಮಗಳಲ್ಲಿ ನಮ್ಮ ರೋವರ್ಸ್–ರೇಂಜರ್ಸ್‌ಗಳು, ಸ್ಕೌಟ್ಸ್–ಗೈಡ್ಸ್‌ಗಳು, ದಳನಾಯಕರುಗಳು ಹಾಗೂ ಶಿಕ್ಷಕರುಗಳ ಸೇವೆ, ಶಿಸ್ತು ಮತ್ತು ಸಮಾಜಸೇವೆ ಎಲ್ಲೆಡೆ ಮೆಚ್ಚುಗೆಗೆ ಪಾತ್ರವಾಗಿದೆ. ಹಾಸನದಲ್ಲಿ ನಡೆದ ಹಾಸನಾಂಬ ಜಾತ್ರಾ ಮಹೋತ್ಸವ ಹಾಗೂ ಶ್ರೀ ಮಲೆಮಹದೇಶ್ವರ ದೇವಸ್ಥಾನದಲ್ಲಿ ನಮ್ಮ ಮಕ್ಕಳುಗಳ, ಯುವಕರ ಸೇವೆ ಜನಮನ ಗೆದ್ದಿದೆ. ಇದು ಸರ್ಕಾರ ಮತ್ತು ಶಿಕ್ಷಣ ಇಲಾಖೆ ನಮ್ಮ ಸಂಸ್ಥೆಯ ಮೇಲಿಟ್ಟಿರುವ ಭರವಸೆಗೆ ನೀಡಿದಂತಾಗಿದೆ.

ಮಂಗಳೂರು, ಉಡುಪಿ, ದೊಡ್ಡಬಳ್ಳಾಪುರದಲ್ಲಿ ನಡೆದ 'ಯುವ ಆಪದಮಿತ್ರ – ವಿಪತ್ತು ನಿರ್ವಹಣಾ ತರಬೇತಿ' ಶಿಬಿರಗಳು ನಮ್ಮ ಯುವ ಸ್ಕೌಟ್ ಮತ್ತು ಗೈಡ್‌ಗಳಲ್ಲಿ ಸಂತೋಷ, ಆತ್ಮಗೌರವ, ರಾಷ್ಟ್ರಸೇವೆ ಮತ್ತು ಸಮಾಜಸೇವೆಯ ಪ್ರೇರಣೆ ಮೂಡಿಸಿವೆ. ಕರಾವಳಿ ಭಾಗದ ಜಿಲ್ಲೆಗಳು, ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಂದ ಬಂದು ಭಾಗವಹಿಸಿ, ತರಬೇತಿ ಪಡೆದ ನಮ್ಮ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಈ ತರಬೇತಿ ಭವಿಷ್ಯದ ನಾಯಕತ್ವ ಮತ್ತು ತುರ್ತುಸೇವೆಯ ಅರಿವು ಬೆಳೆಸುವ ಮಹತ್ವದ ಪ್ರಯತ್ನವಾಗಿದೆ.

ಇನ್ನು ಅಕ್ಟೋಬರ್ 02 ರಂದು ಮೈಸೂರು ದಸರಾ ಸಂದರ್ಭದಲ್ಲಿ ಮೈಸೂರಿಗೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸ್ಕೌಟ್ಸ್ ಮತ್ತು ಗೈಡ್ಸ್ ಪದಾಧಿಕಾರಿಗಳು, ಸಂಘಟಕರು ಹಾಗೂ ಅವರ ಕುಟುಂಬ ಸದಸ್ಯರ ಉತ್ಸಾಹಭರಿತ ಭಾಗವಹಿಸುವಿಕೆ ಗಮನಾರ್ಹವಾಗಿತ್ತು. ಇದಕ್ಕಾಗಿ ಮೈಸೂರು ಜಿಲ್ಲಾ ಸಂಸ್ಥೆ ನೀಡಿದ ಆತಿಥ್ಯ ಅತ್ಯಂತ ಅಚ್ಚುಕಟ್ಟಾಗಿತ್ತು.

ಅಕ್ಟೋಬರ್ 3 ರಿಂದ 9ರ ವರೆಗೆ ಕೊಡಗು ಜಿಲ್ಲಾ ಸಂಸ್ಥೆ ಕುಶಾಲನಗರದಲ್ಲಿ ಆಯೋಜಿಸಿದ್ದ ಮೂಲ ತರಬೇತಿ ಶಿಬಿರ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಈ ಶಿಬಿರದ ಅಂಗವಾಗಿ ಹಮ್ಮಿಕೊಂಡಿದ್ದ ನಿವೃತ್ತ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಗೌರವ ಸಮರ್ಪಣೆ ಹಾಗೂ ಸಮ್ಮಿಲನ ಕೂಟ ಕೃತಜ್ಞತೆಯ ಮತ್ತು ಸಾರ್ಥಕತೆಯ ಕ್ಷಣವಾಗಿತ್ತು. ನಮ್ಮ ಹಿರಿಯರ ಸೇವೆ ಮತ್ತು ತ್ಯಾಗಕ್ಕೆ ಗೌರವ ಸಲ್ಲಿಸುವ ಈ ಕಾರ್ಯಕ್ರಮ ಮಾದರಿಯಾಗಿದೆ. ಇಂತಹ ಕಾರ್ಯಕ್ರಮಗಳು ಎಲ್ಲಾ ಜಿಲ್ಲೆಗಳಲ್ಲಿ ನಡೆಯುಬೇಕೆಂಬುದು ನನ್ನ ಅಭಿಲಾಷೆ.

ಬಿಬಿಎಂಪಿ ಜಿಲ್ಲಾ ಸಂಸ್ಥೆಯು ದೊಡ್ಡಬಳ್ಳಾಪುರದ ಡಾ. ಅನಿಬೆಸೆಂಟ್ ತರಬೇತಿ ಕೇಂದ್ರದಲ್ಲಿ ಆಯೋಜಿಸಿದ್ದ ಪದಕ ತರಬೇತಿ ಶಿಬಿರವು ಯುವ ಸ್ಕೌಟ್ಸ್–ಗೈಡ್ಸ್‌ಗಳಲ್ಲಿ ಸ್ಫೂರ್ತಿ, ನೈಪುಣ್ಯ ಮತ್ತು ಸೇವಾ ಮನೋಭಾವ ಬೆಳೆಸಲು ಮಾರ್ಗದರ್ಶನ ಮಾಡಿದೆ.

ಅಕ್ಟೋಬರ್ 25 ರಂದು ಶಿವಮೊಗ್ಗದಲ್ಲಿ ಜಿಲ್ಲಾ ಸಂಸ್ಥೆ ಆಯೋಜಿಸಿದ್ದ ಸರ್ಕಾರಿ ಮತ್ತು ಖಾಸಗಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಉಪನ್ಯಾಸಕಿಯರಿಗೆ "ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಪ್ರಾರಂಭಿಕ ಶಿಬಿರ" ಯಶಸ್ವಿಯಾಗಿ ನಡೆಯಿತು. ಅದೇ ದಿನ ಎನ್.ಇ.ಎಸ್. ಶಿಕ್ಷಣ ಸಂಸ್ಥೆ ಆವರಣದಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಗಳಿಗೆ ಒಂದು ರಾತ್ರಿಯ ಶಿಬಿರವೂ ಅಚ್ಚುಕಟ್ಟಾಗಿ ನೆರವೇರಿತು.

ಅಕ್ಟೋಬರ್ 25 ರಿಂದ 29ರ ವರೆಗೆ ಮೂಡಬಿದಿರೆಯ ಸ್ಕೌಟ್ಸ್ ಮತ್ತು ಗೈಡ್ಸ್ ಕನ್ನಡ ಭವನದಲ್ಲಿ ಮೂಡಬಿದಿರೆ ಸ್ಥಳೀಯ ಸಂಸ್ಥೆ ಹಾಗೂ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಮಟ್ಟದ 'Youth Entrepreneurship Programme, Training on STEM and Robotics and AI Workshop' ಅತ್ಯಂತ ಯಶಸ್ವಿಯಾಗಿದೆ. ಈ ಶಿಬಿರ ತಂತ್ರಜ್ಞಾನ ಮತ್ತು ಉದ್ಯಮಶೀಲತೆಯ ನವೀನ ಅರಿವು ಮೂಡಿಸಲು ಸಹಕಾರಿಯಾಗಿದೆ.

ಅಕ್ಟೋಬರ್ 26 ರಂದು ರಾಷ್ಟ್ರೀಯ ಸಂಸ್ಥೆ, ಕರ್ನಾಟಕ ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ಮೂಡಬಿದಿರೆ ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ನಡೆದ MOP Star Award ಪ್ರಶಸ್ತಿ ಪತ್ರ ಪ್ರದಾನ ಸಮಾರಂಭ ಸ್ಮರಣೀಯ ಯಶಸ್ಸು ಕಂಡಿತು.

ಈ ತಿಂಗಳಲ್ಲಿ ರಾಜ್ಯದ ವಿವಿಧ ಭಾಗಗಳ ಹಲವು ಶಾಲಾ–ಕಾಲೇಜುಗಳಲ್ಲಿ ಹೊಸ ಸ್ಕೌಟ್–ಗೈಡ್ ಹಾಗೂ ರೋವರ್–ರೇಂಜರ್ ಘಟಕಗಳು ಸ್ಥಾಪನೆಯಾಗಿರುವುದು, ನಮ್ಮ ಚಳುವಳಿಯ ಶಕ್ತಿಯುತ ಬೆಳವಣಿಗೆಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಘಟಕಗಳ ವಿಸ್ತಾರ ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಿ ರಾಜ್ಯದ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳು ಸ್ಕೌಟಿಂಗ್ ಮತ್ತು ಗೈಡಿಂಗ್ ಚಟುಟಿಕೆಗಳ ಕೇಂದ್ರವಾಗಲೆಂದು ಆಶಿಸುತ್ತೇನೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ನನಗೆ ವಿಶೇಷ ಅನುಭವ ಮತ್ತು ಹೆಮ್ಮೆಯ ಕ್ಷಣಗಳನ್ನು ನೀಡಿತು. ಇವುಗಳ ಯಶಸ್ಸಿಗೆ ಸಹಕಾರ ಮತ್ತು ಪ್ರೋತ್ಸಾಹ ನೀಡುತ್ತಿರುವ ಸರ್ಕಾರ, ಶಿಕ್ಷಣ ಇಲಾಖೆ, ಸಹಭಾಗಿತ್ವ ನೀಡಿದ ಸಂಸ್ಥೆಗಳು ಮತ್ತು ನಮ್ಮ ಸಂಸ್ಥೆಯ ವಿವಿದ ಹಂತದ ಎಲ್ಲ ಪದಾಧಿಕಾರಿಗಳು, ಶಿಕ್ಷಕರುಗಳು, ಹಾಗೂ ಸ್ಕೌಟ್ಸ್, ಗೈಡ್ಸ್‌ಗಳಿಗೆ ಹೃತ್ಪೂರ್ವಕ ಅಭಿನಂದನೆಗಳು. ಈ ಚಟುವಟಿಕೆಗಳ ಯಶಸ್ಸು ಮುಂದಿನ ತಿಂಗಳಲ್ಲಿ ನಡೆಯಲಿರುವ ಹಲವು ಕಾರ್ಯಕ್ರಮಗಳಿಗೆ ಪ್ರೇರಣೆಯಾಗಲಿ ಎಂಬುದು ನನ್ನ ಹಾರೈಕೆ.

ನವೆಂಬರ್ 07ರಂದು ನಾವು ಸ್ಥಾಪನಾ ದಿನವನ್ನಾಗಿ (Foundation Day) ಆಚರಿಸುತ್ತೇವೆ. 1950ರ ನವೆಂಬರ್ 07 ರಂದು ಭಾರತದಲ್ಲಿ ಹರಡಿಹೋಗಿದ್ದ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗಳು ಒಟ್ಟುಗೂಡಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಉದಯವಾಯಿತು. ಅದರ ದ್ಯೋತಕವಾಗಿ, ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲಿ ಮತ್ತು ತಾಲ್ಲೂಕುಮಟ್ಟದಲ್ಲಿ ಅಂದು ಧ್ವಜಚೀಟಿಗಳನ್ನು ಸಚಿವರುಗಳು, ಶಾಸಕರುಗಳು, ಜಿಲ್ಲಾಧಿಕಾರಿಗಳು, ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಉಪನಿರ್ದೇಶಕರುಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗು ಸಮಾಜದ ಹಿರಿಯ ವ್ಯಕ್ತಿಗಳಿಂದ ಬಿಡುಗಡೆ ಮಾಡಿಸಿ, ಅದರ ಮಾರಾಟದಿಂದ ನಿಧಿ ಸಂಗ್ರಹ ಮಾಡುವುದರಿಂದ ಸಂಸ್ಥೆಯ ಚಟುವಟಿಕೆಗಳು ವಿಸ್ತರಿಸುವಲ್ಲಿ ಸಹಕಾರಿಯಾಗುತ್ತದೆ.

ನಮ್ಮ ಸಂಸ್ಥೆಯ ವಾರ್ಷಿಕ ಯೋಜನೆಯಂತೆ, ಈ ನವೆಂಬರ್ ತಿಂಗಳು ಹಲವಾರು ಅರ್ಥಪೂರ್ಣ ಕಾರ್ಯಕ್ರಮಗಳು ಮತ್ತು ಶಿಬಿರಗಳನ್ನು ಏರ್ಪಡಿಸಲಾಗಿದೆ. ನವೆಂಬರ್ 2 ರಿಂದ 7ರ ವರೆಗೆ ಹೊಸದುರ್ಗದ ಸಾಣೇಹಳ್ಳಿ ಮಠದಲ್ಲಿ ಆಧುನಿಕ ಕೃಷಿ, ಸಾವಯವ ಹಾಗೂ ಸಿರಿಧಾನ್ಯಗಳ ಮಾಹಿತಿ ಶಿಬಿರ, ನವೆಂಬರ್ 8 ಮತ್ತು 9 ರಂದು ದೊಡ್ಡಬಳ್ಳಾಪುರದಲ್ಲಿ 19ನೇ ರಾಷ್ಟ್ರೀಯ ಪೂರ್ವಸಿದ್ದತಾ ಶಿಬಿರ, ನವೆಂಬರ್ 12 ರಿಂದ 15ರ ವರೆಗೆ ಕೊಂಡಜ್ಜಿ ರಾಜ್ಯ ತರಬೇತಿ ಕೇಂದ್ರದಲ್ಲಿ ಕೊಂಡಜ್ಜಿ ಬಸಪ್ಪ ಅವರ ಪುಣ್ಯ ಸ್ಮರಣೆ ಮತ್ತು ರಾಜ್ಯಮಟ್ಟದ ಬ್ಯಾಡ್ಜ್ ಕ್ಯಾಂಪ್‌ಗಳನ್ನು ಆಯೋಜಿಸಲಾಗಿದೆ. 21 ರಿಂದ 23ರ ವರೆಗೆ ಧಾರವಾಡ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳ ಮಕ್ಕಳಿಗೆ ರಾಷ್ಟ್ರಪತಿ ಪುರಸ್ಕಾರ ಪರೀಕ್ಷೆಗಳು, 28 ರಿಂದ 30ರ ವರೆಗೆ ಕೊಂಡಜ್ಜಿ ಮತ್ತು ದೊಡ್ಡಬಳ್ಳಾಪುರದಲ್ಲಿ ರಾಜ್ಯ ಪುರಸ್ಕಾರ ಸ್ಕೌಟ್-ಗೈಡ್ ಶಿಬಿರಗಳು ನಡೆಯಲಿವೆ. ವಿಶೇಷವಾಗಿ ನವೆಂಬರ್ 23 ರಿಂದ 29ರ ವರೆಗೆ ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆಯಲಿರುವ 19ನೇ ರಾಷ್ಟ್ರೀಯ ಜಾಂಬೋರಿಗೆ ನಮ್ಮ ರಾಜ್ಯದ ಸುಮಾರು 800 ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಲಿದ್ದಾರೆ. ಈ ಎಲ್ಲಾ ಚಟುವಟಿಕೆಗಳು ನಮ್ಮ ಸಂಘಟನೆಯ ಏಕತೆ, ಶಿಸ್ತು, ಸೇವಾಮನೋಭಾವ ಮತ್ತು ಪ್ರೇರಣೆಯ ಸಂಕೇತಗಳಾಗಿವೆ. ನಮ್ಮಗಳ ಉತ್ಸಾಹ, ಬದ್ದತೆ, ಕ್ರಿಯಾಶೀಲತೆ ಮತ್ತು ಶಿಸ್ತು ನವೆಂಬರ್ ತಿಂಗಳ ಕಾರ್ಯಕ್ರಮಗಳಿಗೂ ಪ್ರೇರಣಾದಾಯಕವಾಗಿಸಲಿ ಎಂಬುದು ನನ್ನ ಹಾರೈಕೆ.

ಶ್ರೀ ಕೊಂಡಜ್ಜಿ ಬಸಪ್ಪ ಅವರು ರಾಜಕೀಯದಲ್ಲಿ ದಿಗ್ಗಜ ನಾಯಕರಾಗಿದ್ದ, ಅವರಿಗೆ ರಾಜಕಾರಣಕ್ಕಿಂತಲೂ ಹೆಚ್ಚು ಪ್ರಿಯವಾಗಿದ್ದ ಕ್ಷೇತ್ರ ಎಂದರೆ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆ. ಮಕ್ಕಳಲ್ಲಿ ಸ್ವಯಂಸೇವಾ ಮನೋಭಾವ, ಶಿಸ್ತು, ಧೈರ್ಯ, ಸಾಹಸ ಮತ್ತು ಉತ್ತಮ ನಡೆನುಡಿ ಬೆಳೆಸಲು ತಮ್ಮ ಜೀವನವನ್ನು ಸಂಪೂರ್ಣವಾಗಿ ಸಮರ್ಪಿಸಿದರು. ವಕೀಲರಾಗಿ ನಂತರ ರಾಜ್ಯ ಹಾಗು ಕೇಂದ್ರ ಸಚಿವರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದ ಅವರು 1950ರಲ್ಲಿ ದಾವಣಗೆರೆ ಜಿಲ್ಲಾ ಆಯುಕ್ತರಾಗಿ ನೇಮಕಗೊಂಡು, ರಾಜ್ಯ ಸಂಸ್ಥೆಯಲ್ಲಿ ಸಹಾಯಕ ರಾಜ್ಯ ಆಯುಕ್ತರಾಗಿ, ರಾಜ್ಯ ಕಾರ್ಯದರ್ಶಿಯಾಗಿ, ನಂತರ 1968 ರಿಂದ 1982ರ ವರೆಗೆ ರಾಜ್ಯದ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಧಾನ ಆಯುಕ್ತರಾಗಿ ಬದ್ದತೆಯ ಸೇವೆ ಸಲ್ಲಿಸಿದವರು. ಬದುಕಿನ ಕೊನೆ ಕ್ಷಣದವರೆಗೆ ಸ್ಕೌಟ್ ಸಂಘಟನೆಯಲ್ಲಿ ತೊಡಗಿದ್ದ ಅವರ ಸೇವೆ ಸ್ಮರಣೀಯವಾಗಿದೆ. ನವೆಂಬರ್ 14 ರಂದು ಅವರ ನಿಧನದ ದಿನವನ್ನು ಪ್ರತಿವರ್ಷ ಕೊಂಡಜ್ಜಿ ತರಬೇತಿ ಕೇಂದ್ರದಲ್ಲಿ ಪುಣ್ಯಸ್ಮರಣೆ ಹಾಗೂ ರಾಜ್ಯಮಟ್ಟದ ಬ್ಯಾಡ್ಜ್ ಕ್ಯಾಂಪ್‌ಗಳನ್ನು ಆಯೋಜಿಸುವ ಮೂಲಕ ಗೌರವ ಸಮರ್ಪಿಸುತ್ತಾ ಬಂದಿರುವುದು ಅರ್ಥಪೂರ್ಣವಾಗಿದೆ.

ನವೆಂಬರ್ 14 "ಮಕ್ಕಳ ದಿನಾಚರಣೆ"ಯೂ ಹೌದು. ನಾವು ಚಾಚಾ ನೆಹರು ಎಂದೇ ಪ್ರೀತಿಯಿಂದ ಕರೆಯಲ್ಪಟ್ಟ ಭಾರತದ ಮೊದಲ ಪ್ರಧಾನಮಂತ್ರಿ ಜವಾಹರ್ ಲಾಲ್ ನೆಹರೂ ಅವರ ಜನ್ಮದಿನವಾದ ಆ ದಿನವನ್ನು ಮಕ್ಕಳ ದಿನವೆಂದು ಘೋಷಿಲಾಗಿದೆ.

ಈ ಇಬ್ಬರು ದಿಗ್ಗಜರನ್ನು ಸ್ಮರಿಸುವ ಈ ವಿಶೇಷ ದಿನವನ್ನು ಅರ್ಥಪೂರ್ಣವಾಗಿಸೋಣ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ. ಎಲ್ಲರಿಗೂ ಶುಭವಾಗಲಿ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

## 19ನೇ ರಾಷ್ಟ್ರೀಯ ಜಾಂಬೂರಿ, ಲಕ್ನೋ, ಉತ್ತರಪ್ರದೇಶ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರ ಸಂಸ್ಥೆ ನವದೆಹಲಿ ಇವರು ದಿನಾಂಕ 23 ರಿಂದ 29 ನವೆಂಬರ್ 2025ರ ವರಗೆ ಡಿಫೆನ್ಸ್ ಎಕ್ಸ್‌ಪೋಗ್ರೌಂಡ್, ಯೋಗ್ನಾ, ಲಕ್ನೋ, ಉತ್ತರ ಪ್ರದೇಶ ಇಲ್ಲಿ 19ನೇ ರಾಷ್ಟ್ರೀಯ ಜಾಂಬೂರಿ ಹಾಗೂ 75ನೇ ಅಮೃತ ಮಹೋತ್ಸವದ ಆಚರಣೆಯನ್ನು ಉತ್ತರ ಪ್ರದೇಶ ರಾಜ್ಯದವರ ಆತಿಥ್ಯದಲ್ಲಿ ನೆರವೇರಿಸುತ್ತಿದ್ದಾರೆ.

ಕರ್ನಾಟಕ ರಾಜ್ಯದಿಂದ, ಮಾನ್ಯ ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನ ಹಾಗು ಪ್ರೋತ್ಸಾಹದಲ್ಲಿ 800 ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರುಗಳು ಭಾಗವಹಿಸಲಿದ್ದಾರೆ. ಕರ್ನಾಟಕದ ಕಲೆ, ಸಂಸ್ಕೃತಿ, ಸಾಹಿತ್ಯ, ಆಹಾರಪದ್ಧತಿ, ಸ್ಮಾರಕಗಳು ಸ್ಕೌಟಿಂಗ್ ಪ್ರಗತಿ ಇತ್ಯಾದಿಗಳನ್ನು ಪ್ರದರ್ಶಿಸಲು ಮತ್ತು ಎತ್ತಿ ಹಿಡಿಯಲು ಉತ್ತಮ ತಯಾರಿಯೊಂದಿಗೆ ಮಕ್ಕಳು & ಶಿಕ್ಷಕರು ಭಾಗವಹಿಸುತ್ತಿದ್ದಾರೆ.

ದಿನಾಂಕ 8 ಮತ್ತು 9 ನವೆಂಬರ್ 2025ರ ವರೆಗೆ ಡಾ. ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರದಲ್ಲಿ ಪೂರ್ವ ಸಿದ್ದತಾ ಜಾಂಬೂರಿಯನ್ನು ಸಂಘಟಿಸಲಾಗುತ್ತಿದೆ.








**ಅಕ್ಟೋಬರ್ 23ರಂದು ಹಾಸನದ ಶ್ರೀ ಹಾಸನಾಂಬ ದರ್ಶನ ಮತ್ತು ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಸೇವಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಹಾಸನ ಜಿಲ್ಲಾಧಿಕಾರಿಗಳಾದ ಡಾ. ಲತಾಕುಮಾರಿ ಅವರು ಸಮಾರೋಪ ಭಾಷಣ ಮಾಡಿ ರೋವರ್-ರೇಂಜರ್‌ಗಳೊಂದಿಗೆ ಸಂಭ್ರಮಿಸಿದರು.**

## ನವೆಂಬರ್-2025ರ ಕಾರ್ಯಕ್ರಮ ಮತ್ತು ಚಟುವಟಿಕೆಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಕನ್ನಡ ರಾಜ್ಯೋತ್ಸವ ಆಚರಣೆ | 01 ನವೆಂಬರ್ | ಎಲ್ಲಾ ಹಂತದಲ್ಲಿ |
| 2 | ರಾಜ್ಯ ಮಟ್ಟದ ರೋವರ್ಸ್-ರೇಂಜರ್ಸ್ ಆಧುನಿಕ ಕೃಷಿ, ಸಾವಯುವ, ಸಿರಿಧಾನ್ಯಗಳು ಮತ್ತು ಸ್ವಯಂ ಉದೋಗ ಮಾಹಿತಿ ಶಿಬಿರ. | 02 ರಿಂದ 07 ನವೆಂಬರ್ | ಶ್ರೀ ಮಠ, ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗಾ ಜಿಲ್ಲೆ |
| 3 | ಯುವ ಆಪದ್‌ಮಿತ್ರ ತರಬೇತಿ ಕಾರ್ಯಕ್ರಮ | 04 ರಿಂದ 10 ನವೆಂಬರ್ | ಶ್ರೀ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ. |
| 4 | ಧ್ವಜ ಚೀಟಿ ಬಿಡುಗಡೆ/ ಸಂಸ್ಥಾಪನಾ ದಿನಾಚರಣೆ | ನವೆಂಬರ್ 07 | ಎಲ್ಲಾ ಹಂತದಲ್ಲಿ |
| 5 | 19ನೇ ರಾಷ್ಟ್ರೀಯ ಜಾಂಬೂರಿ ಪೂರ್ವ ಸಿದ್ದತಾ ಶಿಬಿರ | 08 ರಿಂದ 09 ನವೆಂಬರ್ | ಡಾ॥ ಆನಿಬೆಸೆಂಟ್ ಸ್ಕೌಟ್ಸ್ & ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ |
| 6 | ರಾಜ್ಯ ಮಟ್ಟದ ಪದಕ ತರಬೇತಿ ಶಿಬಿರ ಮತ್ತು ಶ್ರೀ ಕೊಂಡಜ್ಜಿ ಬಸಪ್ಪನವರ ಪುಣ್ಯ ಸ್ಮರಣೆ | 12 ರಿಂದ 15 ನವೆಂಬರ್ | ಶ್ರೀ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ |
| 7 | ರಾಜ್ಯ ಮಟ್ಟದ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳು | 18 ರಿಂದ 24 ನವೆಂಬರ್ | ಶ್ರೀ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ<br>ಡಾ॥ ಆನಿಬೆಸೆಂಟ್ ಸ್ಕೌಟ್ಸ್ & ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ. |
| 8 | 19ನೇ ರಾಷ್ಟ್ರೀಯ ಡೈಮಂಡ್‌ಜೂಬಿಲಿ ಜಾಂಬೂರಿ | 23 ರಿಂದ 29 ನವೆಂಬರ್ | ಲಕ್ನೋ, ಉತ್ತರ ಪ್ರದೇಶ |
| 9 | ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್, ಗೈಡ್ಸ್ ಪರೀಕ್ಷಾ ಶಿಬಿರ | 28 ರಿಂದ 30 ನವೆಂಬರ್ | ಶ್ರೀ ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ |
| 10 | ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್, ಗೈಡ್ಸ್ ಪರೀಕ್ಷಾ ಶಿಬಿರ | 28 ರಿಂದ 30 ನವೆಂಬರ್ | ಡಾ॥ ಆನಿಬೆಸೆಂಟ್ ಸ್ಕೌಟ್ಸ್ & ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ. |
| 11 | ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್, ಗೈಡ್ಸ್ ಪರೀಕ್ಷಾ ಶಿಬಿರ | 21 ರಿಂದ 23 ನವೆಂಬರ್ | ಬೆಳಗಾವಿ, ವಿಜಯಪುರ, ಧಾರವಾಡ |

# ಸಂಪಾದಕೀಯ



ಮಾನ್ಯರೆ,

ದೇಶದ ಭವ್ಯ ಭವಿಷ್ಯದ ನಿರ್ಮಾಣದಲ್ಲಿ "ಯುವ ಶಕ್ತಿ"ಯ ಪಾತ್ರ ಅಪಾರ. ಇದನ್ನು ಮನಗಂಡು ರಾಷ್ಟ್ರ, ರಾಜ್ಯದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ರಾಜ್ಯ ಸಂಸ್ಥೆಯು ರಾಜ್ಯ ಮುಖ್ಯ ಆಯುಕ್ತರವರ ದಿಟ್ಟ ನೇತೃತ್ವ ಮತ್ತು ಸಕ್ರಿಯ ಮಾರ್ಗದರ್ಶನದಲ್ಲಿ ವರ್ಷಪೂರ್ತಿ ಯೋಜನಾ ಬದ್ಧವಾಗಿ ಹಲವಾರು ಕಾರ್ಯಚಟುವಟಿಕೆಗಳು, ತರಬೇತಿಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವುದು ಸರಿಯಷ್ಟೆ. ಅದರಂತೆ ಈ ಅಕ್ಟೋಬರ್ 2025ರ ಮಾಹೆಯಲ್ಲಿ "ಯುವಕರ" ಜ್ಞಾನ, ಕೌಶಲ್ಯ ಮತ್ತು ಮನೋಭಾವನೆಗಳನ್ನು ವೃದ್ಧಿಸಿ ಪ್ರಜ್ವಲಿಸುವಂತೆ ಮಾಡುವಲ್ಲಿ ಕ್ರಮವಹಿಸಿದ್ದು, ಅವುಗಳಲ್ಲಿ ಕೆಲವುಗಳ ಬಗ್ಗೆ ತಿಳಿಸುತ್ತಾ, ಈ ಬಗ್ಗೆ ಶ್ರಮಿಸಿದ ಸರ್ವರಿಗೂ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

ಅಕ್ಟೋಬರ್ 2ರಂದು ಏರ್ಪಡಿಸಿದ್ದ ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಗಳವರ ಹುಟ್ಟುಹಬ್ಬದ ದಿನಾಚರಣಾ ಸಮಾರಂಭಗಳು ಎಲ್ಲಾ ಹಂತಗಳಲ್ಲೂ ಅರ್ಥಗರ್ಭಿತವಾಗಿ ನಿರ್ವಹಣೆ ಆಗಿದ್ದು, ಅವರ ಸರಳ ಬದುಕು, ಜೀವನ ಶಿಕ್ಷಣ, ದೇಶಪ್ರೇಮ, ಸಾಮಾಜಿಕ ಜವಾಬ್ದಾರಿಯ ನಿರ್ವಹಣೆ, ಸತ್ಯ, ಅಹಿಂಸೆ, ತ್ಯಾಗ ಮುಂತಾದ ಗುಣಗಳ ಬಗ್ಗೆ ಗಮನ ಹರಿಸಿ, ಮೈಗೂಡಿಸಿಕೊಳ್ಳುವಂತಾಗುವಲ್ಲಿ ಯುವಕರುಗಳಿಗೆ ಕಾರ್ಯ–ಚಟುವಟಿಕೆಗಳನ್ನು ನಿರ್ವಹಿಸಿರುವುದು ಹರ್ಷದಾಯಕ.

ಹಾಸನದಲ್ಲಿ ಏರ್ಪಟ್ಟ ಹಾಸನಾಂಭ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿಯವರ ಜಾತ್ರಾ ಮಹೋತ್ಸವದ ರಾಜ್ಯ ಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಸೇವಾ ಶಿಬಿರದಲ್ಲಿ 1300ಕ್ಕೂ ಹೆಚ್ಚು ಅಭ್ಯರ್ಥಿಗಳು, ಸಕ್ರಿಯವಾಗಿ ಭಾಗವಹಿಸಿ, ಹಗಲಿರುಳೆನ್ನದೆ ಭಕ್ತಾದಿಗಳ ಸೇವೆಗಳಲ್ಲಿ ಭಾಗವಹಿಸಿ, ಪ್ರಾಮಾಣಿಕತೆಯನ್ನು ಮೆರೆದು, ಸರ್ವರ ಆದರಾಭಿಮಾನಕ್ಕೆ ಪಾತ್ರರಾಗಿರುವುದನ್ನು ತಿಳಿಸಲು ಹರ್ಷಿಸುತ್ತೇನೆ.

ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಪ್ರತಿ ಭಾನುವಾರದಂದು Scout-Skillo ಕಾರ್ಯಕ್ರಮದಡಿಯಲ್ಲಿ ನಿರ್ವಹಣೆ ಆಗುತ್ತಿರುವ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಪ್ರೇರಕ ಮತ್ತು ಪೂರಕ ಆಗಿರುವ ವಿವಿಧ ಪ್ರಾವಿಣ್ಯತಾ ಪದಕಗಳ ಬಗ್ಗೆ ಪ್ರತಿಭಾನ್ವಿತ, ಅರ್ಹ ಸಂಪನ್ಮೂಲ ವ್ಯಕ್ತಿಗಳಿಂದ, ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಮಾರ್ಗದರ್ಶನ ಹರ್ಷದಾಯಕವಾಗಿದ್ದು, ಆ ಕಾರ್ಯಕ್ರಮಗಳಲ್ಲಿ ತಪ್ಪದೆ ಹೆಚ್ಚು–ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, ಅದರ ಸತ್ಫಲ ಹೊಂದುವಲ್ಲಿ ಸರ್ವರೂ ಆದ್ಯ ಕ್ರಮ ವಹಿಸಬೇಕಾಗಿ ವಿನಂತಿಸಿದೆ.

ಅಕ್ಟೋಬರ್ 14 ರಂದು ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ ತಾ॥ ಇಲ್ಲಿ ಶ್ರೀ ರವೀಂದ್ರಗೌಡ. ಎಸ್.ಎಂ., ನೋಡಲ್ ಅಧಿಕಾರಿಗಳು ರೋವರ್ಸ್ ಮತ್ತು ರೇಂಜರ್ಸ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಶಿವಮೊಗ್ಗರವರ ಸಹಯೋಗದೊಂದಿಗೆ ಏರ್ಪಟ್ಟ ರೋವರ್ಸ್ ಸ್ಕೌಟ್ಸ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಪ್ರಾರಂಭ ಶಿಬಿರದಲ್ಲಿ ಮತ್ತು ಅಕ್ಟೋಬರ್ 25 ರಂದು ಶಿವಮೊಗ್ಗ NES-IAS ಸಂಸ್ಥೆಯಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಏರ್ಪಟ್ಟ್ ಸದರಿ ಸಂಸ್ಥೆಯ ಗಣ್ಯರು, ವಿದ್ಯಾರ್ಥಿಗಳು ಮತ್ತು ಜಿಲ್ಲಾ ಪದಾಧಿಕಾರಿಗಳೆಲ್ಲರ ಮತ್ತು ಭಾಗವಹಿಸಿದ ಇತರ ಸ್ಕೌಟ್ಸ್–ಗೈಡ್ಸ್ ಚಳವಳಿ ಅಭಿಮಾನಿಗಳ ಸಭೆಗಳು ಬಹಳಷ್ಟು ಅರ್ಥಗರ್ಭಿತವಾಗಿ ನಿರ್ವಹಣೆ ಆಗಿದ್ದು, ಈ ಚಳವಳಿಯ ಯಶಸ್ವಿ ನಿರ್ವಹಣೆಗೆ ಅವರೆಲ್ಲರ ಆದರಾಭಿಮಾನದ ಪ್ರೋತ್ಸಾಹ, ಪ್ರೇರಣೆ ಅನುಕರಣೀಯ.

ಯುವ ಶಕ್ತಿಯನ್ನು ಪ್ರೇರೇಪಿಸುವ ಕಾರ್ಯಕ್ರಮಗಳಡಿಯಲ್ಲಿ ರಾಷ್ಟ್ರೀಯ ಸಂಸ್ಥೆಯು ರಾಜ್ಯ ಸಂಸ್ಥೆಗೆ ಬಹಳಷ್ಟು ಕಾರ್ಯಚಟುವಟಿಕೆಗಳ ನಿರ್ವಹಣೆಯ ಜವಾಬ್ದಾರಿಗಳನ್ನು ನೀಡುತ್ತಿದ್ದು, ಅದರಂತೆ ಅಕ್ಟೋಬರ್ 25 ರಿಂದ 29ರ ವರೆಗೆ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮತ್ತು ನಮ್ಮ ರಾಜ್ಯ ಸಂಸ್ಥೆಯ ಸಹಯೋಗದೊಂದಿಗೆ a) National Level Training on STEM, b) Robotics & AI Workshop and Youth Entrepreneurship Programmesಗಳು ಪ್ರತಿಷ್ಠಿತ ಆಳ್ವಾಸ್ ಶಿಕ್ಷಣ ಸಂಸ್ಥೆಯವರ ಸಕ್ರಿಯ ಸಹಕಾರದೊಂದಿಗೆ ಯಶಸ್ವಿಯಾಗಿ ನಿರ್ವಹಣೆ ಆಗಿರುವುದು ಹರ್ಷದಾಯಕ.

ಜೊತೆಗೆ ರಾಷ್ಟ್ರಮಟ್ಟದ "Messenger of Peace Star" ಪದಕಕ್ಕೆ ನಮ್ಮ ರಾಜ್ಯ ಸಂಸ್ಥೆಯು ಭಾಜನ ಆಗಿರುವುದಲ್ಲದೆ, ನಮ್ಮ ರಾಜ್ಯದ ಅನೇಕರು "Messenger of Peace Star" ಪದಕದ ಗೌರವಕ್ಕೆ ಪಾತ್ರರಾಗಿ ಸನ್ಮಾನಿತರಾಗಿರುವುದು ಅಭಿನಂದನೀಯ. ಈ ರಾಷ್ಟ್ರಮಟ್ಟದ ಸನ್ಮಾನ ಸಮಾರಂಭ ಕಾರ್ಯಚಟುವಟಿಕೆಗಳು ನಮ್ಮ ರಾಜ್ಯದಲ್ಲಿ, ಮೂಡಬಿದರೆಯಲ್ಲಿ ನಿರ್ವಹಣೆ ಆಗಲು ಅವಕಾಶ ನೀಡಿದ್ದಕ್ಕಾಗಿ ರಾಷ್ಟ್ರೀಯ ಸಂಸ್ಥೆಯವರೆಲ್ಲರಿಗೂ ಅನಂತಾನಂತ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಕೇಂದ್ರ ಮತ್ತು ರಾಜ್ಯ ಮಟ್ಟದ ಸಹಯೋಗದೊಂದಿಗೆ ನಮ್ಮ ರಾಜ್ಯ ಸಂಸ್ಥೆಯಿಂದ "ಅಪದ ಮಿತ್ರ" ಯೋಜನೆಯಡಿಯಲ್ಲಿ ವಿಪತ್ತು ನಿರ್ವಹಣಾ ತರಬೇತಿಗಳು, ಈ ಅಕ್ಟೋಬರ್ 2025ರಮಾಹೆಯಲ್ಲಿ ರಾಯಚೂರು, ಕಲಬುರಗಿ ಮತ್ತು ಯಾದಿಗಿರ ಜಿಲ್ಲೆಯ ರೋವರ್ಸ್–ರೇಂಜರ್ಸ್‌ಗಳಿಗೆ ಯಶಸ್ವಿಯಾಗಿ ನಿರ್ವಹಣೆ ಆಗಿರುವುದು ಸಮುದಾಯವು ವಿಪತ್ತಿನ ಸಂದರ್ಭದಲ್ಲಿಯ ಆಪತ್ತಿನಲ್ಲಿ ಈ ಯುವಶಕ್ತಿಯು ವಹಿಸುವ ಜವಾಬ್ದಾರಿಗಳ ಬಗ್ಗೆ ಸ್ಪಷ್ಟ ಮಾಹಿತಿ ದೊರೆಯುವಂತಾಗಿ ಅವರುಗಳೆಲ್ಲರೂ ಸ್ವಯಂಪ್ರೇರಿತರಾಗಿ ಹೆಚ್ಚು–ಹೆಚ್ಚು ಸೇವಾ ಕಾರ್ಯಗಳಲ್ಲಿ ಭಾಗವಹಿಸುವಂತೆ ಪ್ರೇರಣೆ (Yuva Sethuಗಳಾಗಿ) ನೀಡಿರುವುದು ಸ್ಪಷ್ಟ. ಈ ವಿಪತ್ತು ನಿರ್ವಹಣಾ ತರಬೇತಿಗಳಲ್ಲಿ ಹೆಚ್ಚು–ಹೆಚ್ಚು ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸುವಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳು ನಮ್ಮ ಸಂಸ್ಥೆಗಳ ರಾಜ್ಯ / ಜಿಲ್ಲಾ / ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಆದ್ಯ ಗಮನಹರಿಸಿ ಯಶಸ್ವಿಗೊಳಿಸಬೇಕಾಗಿ ಮತ್ತೊಮ್ಮೆ ವಿನಂತಿಸಿದೆ.

ಜೊತೆಗೆ ಈ ತರಬೇತಿ ಪಡೆದವರ ವಿವರಗಳನ್ನು ಆಯಾಯ ಜಿಲ್ಲಾ ಸಂಸ್ಥೆಗಳವರು ಹೊಂದಿ ಅವರುಗಳನ್ನು ಆಗಿಂದಾಗ್ಗೆ ಸಂಪರ್ಕಸುತ್ತಾ, ಅವರಿಗೆ ಇನ್ನೂ ಹೆಚ್ಚು ಬೇಕಾದ ಈ ವಿಪತ್ತು ನಿರ್ವಹಣಾ ಪ್ರಾವಿಣ್ಯತೆ, ಸಲಹೆ–ಸಹಕಾರಗಳ ಬಗ್ಗೆ ಗಮನಹರಿಸಿ, ಪ್ರೋತ್ಸಾಹಿಸುತ್ತಾ, ಇವರುಗಳು ನಿಜವಾದ ಅರ್ಥದಲ್ಲಿ "ಆಪತ್ ಬಾಂಧವರಾಗಿ" "(Apada Mitra) ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಾಗುವಲ್ಲಿ ಅವಕಾಶ ಆಗಲೆಂದು ಹಾರೈಸುತ್ತೇನೆ. ಅಲ್ಲದೆ ಆಯಾಯ ಜಿಲ್ಲೆಗಳಲ್ಲಿರುವ ವಿವಿಧ ವಿಪತ್ತು ನಿರ್ವಹಣಾ ಇಲಾಖೆಗಳವರ ನಿಕಟ ಸಂಪರ್ಕಹೊಂದಿ ಅವರುಗಳಿಂದ ದೊರೆಯುವ ಎಲ್ಲಾ ಸಲಹೆ, ಸಹಕಾರ, ಸೌಲಭ್ಯ, ಮಾರ್ಗದರ್ಶನ ಇತ್ಯಾದಿಗಳನ್ನು ಆಗಿಂದಾಗ್ಗೆ ಈ ತರಬೇತಿ ಹೊಂದಿದ ರೋವರ್ ಮತ್ತು ರೇಂಜರ್‌ಗಳು ಹೊಂದುವಲ್ಲಿ ಎಲ್ಲಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ / ಸ್ಥಳೀಯ ಸಂಸ್ಥೆಗಳವರು ದೊರಕಿಸಿಕೊಡುತ್ತಾ, ತಮ್ಮ–ತಮ್ಮ ಜಿಲ್ಲೆಯ ಈ "ಅಪದ ಮಿತ್ರ" ತರಬೇತಿ ಹೊಂದಿದ ತಂಡ ಆದರ್ಶ, ಅರ್ಥಗರ್ಭಿತ "Service Team" ಆಗಿ ಎಲ್ಲರ ಮನ್ನಣೆಗೆ ಪಾತ್ರರಾಗುವಲ್ಲಿ ಎಲ್ಲರೂ ಶ್ರಮಿಸಲು ಮತ್ತೊಮ್ಮೆ ವಿನಂತಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ಅಭಿಮಾನಿ ಬಳಗದವರ ಸಹಕಾರದೊಂದಿಗೆ ಈ ಎಲ್ಲಾ ಕಾರ್ಯಚಟುವಟಿಕಗಳು ರಾಜ್ಯ ಸಂಸ್ಥೆಗೆ ಆರ್ಥಿಕ ಹೊರೆ ಆಗದಂತೆ ನಿರ್ವಹಣೆ ಆಗುವಲ್ಲಿ ಎಲ್ಲಾ ರೀತಿಯಲ್ಲೂ ಶ್ರಮಿಸಿ, ಪ್ರೋತ್ಸಾಹಿಸುತ್ತಿರುವ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್.ಸಿಂಧ್ಯರವರ ಪಾತ್ರ ಆದರ್ಶನೀಯ.

ಒಟ್ಟಿನಲ್ಲಿ ಅಕ್ಟೋಬರ್ 2025ರ ಮಾಹೆಯಲ್ಲಿ ನಿಗಧಿಪಡಿಸಿದ ಎಲ್ಲಾ ಕಾರ್ಯಕ್ರಮ, ತರಬೇತಿ ಮತ್ತು ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಸಹಕರಿಸಿದ ಸರ್ವರಿಗೂ ಅನಂತಾನಂತ ವಂದನೆಗಳು. 70ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳೊಂದಿಗೆ ಸ್ಕೌಟ್ಸ್–ಗೈಡ್ಸ್ ವಂದನೆಗಳು,

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

# ಶ್ರೀ ಹಾಸನಾಂಬ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ರೋವರ್ ಮತ್ತು ರೇಂಜರ್‌ಗಳ ಸೇವೆ




ಅಕ್ಟೋಬರ್ 08 ರಿಂದ 23ರ ವರೆಗೆ ಹಾಸನದ ಪ್ರಸಿದ್ಧ ಶ್ರೀ ಹಾಸನಾಂಬ ದರ್ಶನ ಹಾಗು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಗಳಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಲು ರೋವರ್ ರೇಂಜರ್‌ಗಳ ರಾಜ್ಯ ಮಟ್ಟದ ಸೇವಾ ಶಿಬಿರ ಆಯೋಜಿಸಲಾಗಿತ್ತು. ಮೊದಲು ಈ ಕಾರ್ಯವನ್ನು ಕೇವಲ ಹಾಸನದ ಏಕಲವ್ಯ ಮುಕ್ತ ರೋವರ್ ದಳದವರು ನಿರ್ವಹಿಸುತ್ತಿದ್ದರು.

ಕರ್ನಾಟಕದ ಮಾಜಿ ಸಚಿವರು ಹಾಗು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಇದನ್ನು ಗಮನಿಸಿ, ಇದನ್ನು ರಾಜ್ಯ ಮಟ್ಟದ ಸೇವಾ ಶಿಬಿರವನ್ನಾಗಿ ಮಾರ್ಪಡಿಸಲು ಕ್ರಮ ಕೈಗೊಂಡರು. ಅದರಂತೆ ಕಳೆದೆರಡು ವರ್ಷಗಳಿಂದ ಶ್ರೀ ಹಾಸನಾಂಬೆಯ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿಯ ಕೃಪೆ ಹಾಗು ಆಶೀರ್ವಾದದ ಸೌಭಾಗ್ಯ ರಾಜ್ಯದ ಎಲ್ಲಾ ರೋವರ್ – ರೇಂಜರ್‌ಗಳಿಗೆ ಹಾಗು ದಳನಾಯಕ – ನಾಯಕಿಯರಿಗೆ ದೊರಕುವ ಸಂದರ್ಭ ಒದಗಿ ಬಂದಿತು.

ಈ ಸೇವಾ ಕಾರ್ಯವನ್ನು ಮೂರು ತಂಡಗಳಲ್ಲಿ ನಡೆಸಲಾಯಿತು.

ಅಕ್ಟೋಬರ್ 08 ರಿಂದ 13ರ ವರೆಗೆ ಮೊದಲನೆಯ ತಂಡದಲ್ಲಿ 14 ಜಿಲ್ಲೆಗಳಿಂದ ರೋವರ್ಸ್–363, ರೇಂಜರ್ಸ್–427 ಭಾಗವಹಿಸಿದ್ದರು.

ಅಕ್ಟೋಬರ್ 14 ರಿಂದ 17ರ ವರೆಗೆ ಎರಡನೆ ತಂಡದಲ್ಲಿ 15 ಜಿಲ್ಲೆಗಳಿಂದ ರೋವರ್ಸ್– 337, ರೇಂಜರ್ಸ್–459 ಭಾಗವಹಿಸಿದ್ದರು.

ಅಕ್ಟೋಬರ್ 18 ರಿಂದ 23ರ ವರೆಗ ಮೂರನೆ ಹಾಗು ಅಂತಿಮ ತಂಡದಲ್ಲಿ 17 ಜಿಲ್ಲೆಗಳಿಂದ ರೋವರ್ಸ್– 356, ರೇಂಜರ್ಸ್–398 ಭಾಗವಹಿಸಿದ್ದರು.

- ಪ್ರತಿ ದಿನ ಎರಡು ಪಾಳಿಗಳಲ್ಲಿ ಕರ್ತವ್ಯ ನಿರ್ವಹಿಸಲಾಗಿದೆ.
- ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಮೊದಲನೆಯ ಪಾಳಿ.
- ಸಂಜೆ 6 ರಿಂದ ಮರುದಿನ ಬೆಳಿಗ್ಗೆ 6 ರವರೆಗೆ ಎರಡನೆ ಪಾಳಿ.

ಪ್ರತಿ ಪಾಳಿಯಲ್ಲಿಯು ರೋವರ್ – ರೇಂಜರ್‌ಗಳು ಹಾಗು ದಳನಾಯಕ – ನಾಯಕಿಯರು ಉತ್ಸಾಹದಿಂದ ಮತ್ತು ಪ್ರೀತಿಯಿಂದ ಸೇವೆ ಸಲ್ಲಿಸಿ ಎಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಧರ್ಮದರ್ಶನ, ವಿಶೇಷ ದರ್ಶನ, ಗಣ್ಯಾತಿ ಗಣ್ಯರ ದರ್ಶನ, ವಯೋವೃದ್ಧರ ದರ್ಶನ, ವಿಶೇಷ ಚೇತನರ ದರ್ಶನ, ಶಿಷ್ಟಚಾರ ಪಾಲನೆ, ಗರ್ಭಗುಡಿ, ದೇವಸ್ಥಾನದ ಆವರಣ, ಕೋಟಿ ಲಿಂಗ, ಊಟದ ಕೊಠಡಿ, ಪ್ರಸಾದ ವಿತರಣೆ, ಮುಂತಾದ ಕಡೆಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ.

ಈ ಸಂದರ್ಭದಲ್ಲಿ ಒಬ್ಬ ಮಹಿಳೆಯು ಕಳೆದುಕೊಂಡಿದ್ದ ಸುಮಾರು 6 ಲಕ್ಷ ರೂ. ಮೌಲ್ಯದ ಚಿನ್ನದ ಸರವನ್ನು ಅವರಿಗೆ ಹಿಂದುರಿಗಿಸಿ "ಸ್ಕೌಟ್ ಪ್ರಾಮಾಣಿಕ" ಎಂಬುದನ್ನು ಸಾಬಿತು ಪಡಿಸಲಾಗಿದೆ.

ಹಾಸನ ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಮನು ಕುಮಾರ್ ರವರು ರೋವರ್–ರೇಂಜರ್‌ಗಳ ಸೇವೆಯನ್ನು ಶ್ಲಾಘಿಸಿದ್ದಾರೆ. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರು ಎರಡನೆ ತಂಡ ಮತ್ತು ಮೂರನೇ ತಂಡಗಳನ್ನು ಉದ್ದೇಶಿಸಿ ಮಾತನಾಡಿ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ. ಸೇವಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಜಿಲ್ಲಾಧಿಕಾರಿ ಡಾ॥ ಲತಾಕುಮಾರಿ ರವರು ರೋವರ್–ರೇಂಜರ್‌ಗಳ ಸೇವೆಯನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ.

ಈ ಶಿಬಿರದ ಅವಧಿಯಲ್ಲಿ ಡಾ. ವಿ. ಮಂಜುನಾಥ್, ಹೆಚ್ಚುವರಿ ಜಿಲ್ಲಾಧಿಕಾರಿಗಳು ಹಾಗೂ ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಹಾಸನ ಮತ್ತು ಶ್ರೀ ಮನುಕುಮಾರ್ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಹಾಸನ, ಇವರುಗಳ ಮುಂದಾಳತ್ವದಲ್ಲಿ ಪರಿಸರ ಜಾಗೃತಿ ಹಾಗು ಪ್ಲಾಸ್ಟಿಕ್ ಮುಕ್ತ ಹಾಸನ ಅಭಿಯಾನ ಸಹ ನಡೆಸಲಾಯಿತು ಶ್ರೀ ಮಾರುತಿ ಜೆ.ಬಿ ಆರೇರಾ, ಕ.ಆ.ಸೇ ಉಪವಿಭಾಗಾಧಿಕಾರಿ, ಹಾಸನ ಉಪವಿಭಾಗ ಮತ್ತು ಆಡಳಿತಾಧಿಕಾರಿ ಶ್ರೀ ಹಾಸನಾಂಬ ದೇವಾಲಯ ಇವರು ಸಂಪೂರ್ಣ ಮೇಲುಸ್ತುವಾರಿ ವಹಿಸಿದ್ದರು. ಹಾಸನ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಜಯರಮೇಶ್, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ. ಬಿ.ಕೆ. ಬಸವರಾಜ್, ಹಾಸನ ಜಿಲ್ಲಾ ಕಾರ್ಯದರ್ಶಿ ಶ್ರೀ. ಸುರೇಶ್ ಗುರೂಜಿ, ಏಕಲವ್ಯ ಮುಕ್ತ ದಳದ ಶ್ರೀ. ಗಿರೀಶ್ ಮತ್ತು ಶ್ರೀಮತಿ ಕಾಂಚನ ಮಾಲ, ಶ್ರೀಮತಿ ಪ್ರಿಯಾಂಕ, ಎ.ಎಸ್.ಓ.ಸಿ ಮತ್ತು ಜಿಲ್ಲಾ ಪದಾಧಿಕಾರಿಗಳು ಇವರೆಲ್ಲರ ಸಹಕಾರದಿಂದ ಸೇವಾ ಶಿಬಿರವು ಯಶಸ್ವಿಯಾಗಿ ಜರುಗಿತು.

ಶ್ರೀ ಎಲ್.ಟಿ ಲೋಕೇಶ್ ಸಹಾಯಕ ರಾಜ್ಯ ಕಾರ್ಯದರ್ಶಿ, ಇವರು ಈ ಸೇವಾ ಶಿಬಿರದ ನಾಯಕತ್ವ ವಹಿಸಿದ್ದರು. ಸೇವಾ ಶಿಬಿರದಲ್ಲಿ ಪಾಲ್ಗೊಂಡ ರೋವರ್ – ರೇಂಜರ್‌ಗಳ ತಂಡವಾರು ವಿವರ ಇಂತಿದೆ.


ಜಾತ್ರಾ ಮಹೋತ್ಸವ - 2025
ಮತ್ತು ಗೈಡ್ಸ್ ಕರ್ನಾಟಕ,


ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ
ಜಾತ್ರಾ ಮಹೋತ್ಸವ - 2025
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ,
ರಾಜ್ಯಮಟ್ಟದ ರೋವರ್ಸ್ ಮತ್ತು ರೇಂಜರ್ಸ್ ಗಳ













# YUVA Aapda Mitra Training Camp 2025



The Bharat Scouts and Guides, Karnataka organized the YUVA Aapda Mitra Training Camp 2025 from 14th to 20th October 2025 at the Dr. Annie Besant Scouts and Guides State Training and Camping Centre, Doddaballapura, Bengaluru Rural.

A total of 480 youth volunteers - including 212 Rovers and 268 Rangers from Raichur District — participated in this week-long residential camp conducted under the YUVA Aapda Mitra Scheme of the National Disaster Management Authority (NDMA) Government of India and State Disaster Management Authority (SDMA) State Government of Karnataka. The training aimed to equip young Scouts and Guides with disaster management, first aid, and rescue skills, empowering them to act as first responders during emergencies.

The camp commenced on 14th October with registration, orientation and team integration activities. The inaugural ceremony, held on 15th October 2025, was graced by Sri Basavaraj A.B., IAS, Deputy Commissioner, Bengaluru Rural District, and Sri C.K. Baba, IPS, Superintendent of Police, Bengaluru Rural District, as Chief Guests. The event was also attended by several distinguished guests and officials from The Bharat Scouts and Guides, Karnataka.

Smt. Malleshwari Jujare, Assistant State Organising Commissioner (Ranger In-charge), BSG Karnataka, extended a warm welcome to all dignitaries and participants, Smt. Latha B.V., State Programme Assistant, YUVA Aapda Mitra Scheme, introduced the objectives of the training. Sri Basavaraj A.B., IAS, in his address said. “Building a culture of preparedness among our youth is crucial. Training programs like this ensure that every volunteer becomes a pillar of support in times of crisis.” Sri. C.K. Baba, IPS, in his motivational address remarked. “Disaster management is not just about rescue - it is about awareness, teamwork, and service. The Bharat Scouts and Guides have always embodied these values, and I am proud to see such commitment among the youth”.

Sri P.G.R. Sindhia, State Chief Commissioner, The Bharat Scouts and Guides, Karnataka, delivered the Presidential Address and said “Scouts and Guides have always been first to respond in any crisis. Through this initiative, we are strengthening the network of trained youth who stand ready to serve their communities selflessly.”

Vote of Thanks was proposed by Sri Ambanna Naik, Scout Guide Volunteer, Raichur District. The camp featured focused modules on First Aid, Basic Life Support (BLS), and Cardio-Pulmonary Resuscitation




(CPR), facilitated by Dr. Rajesh, Dr. Anil & Dr. Rakesh from Sri Devaraj Urs Medical College, Kolar. Participants practiced bleeding control, fracture management, casualty evacuation, and use of improvised rescue materials.

A special highlight of the camp was the participation of experts from the National Disaster Response Force (NDRF) 10th Betalian, Yelahanka Centre as resource persons for one full day. NDRF trainers conducted sessions on Search and Rescue (SAR) operations, rope rescue techniques, and flood response and casualty handling.

Participants received hands-on training by Com. Raghunath in HAM Radio operations and JOTA-JOTI (Jamboree On The Air and Internet) communication, which emphasized the role of alternative communication during network failures in disasters. Fire Safety and Evacuation drills were conducted in collaboration with Mr. Manjunath Mukkannanavor of local Fire and Emergency Services, where trainees learned to use extinguishers, handle fire blankets, and ensure safe evacuation.

Simulation-based exercises on earthquakes, landslides, and floods gave participants practical experience in coordination, leadership, and on-the-ground decision-making during emergencies. Subsequent sessions covered secondary hazards like droughts, heatwaves, and cloudbursts, as well as family disaster preparedness and emergency kit making.

An awareness talk on “Snakes of India” helped participants identify venomous species and administer immediate first aid for bites.

The Valedictory Function was held on 19th October 2025. Certificates were presented to all participants. The event concluded with a lively Grand Campfire and Cultural Night. The final day, 20th October, began with an All-Faith Prayer followed by a Climate Change Awareness Session connecting environmental responsibility with disaster prevention.



# ರೊಬೊಟಿಕ್ಸ್, ಕೃತಕ ಬುದ್ಧಿಮತ್ತೆ ಯುವ ಉದ್ಯಮಶೀಲತೆ ಹಾಗೂ ಸ್ಟೆಮ್ ವಿಷಯಗಳನ್ನೊಳಗೊಂಡ ರಾಷ್ಟ್ರೀಯ ಮಟ್ಟದ ಕಾರ್ಯಾಗಾರ



'ಭಾರತದ ಎಲ್ಲಾ ವಿವಿಗಳು ಸ್ನಾತಕೋತ್ತರ ಹಂತದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸ್ಥಾನ ಮೀಸಲಿಡಬೇಕು. ಸ್ಕೌಟ್ಸ್ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಒಂದು ಸಶಕ್ತ ಶಿಕ್ಷಣ ನೀತಿ ಬೇಕು. ಸರ್ವಧರ್ಮಗಳ ಪ್ರಾರ್ಥನೆ ಹೆಸರಿಗಷ್ಟೆ ಜರುಗದೆ ನಿಜಾರ್ಥದಲ್ಲಿ ನಾವೆಲ್ಲ ಒಂದಾಗಿ ಸಹಿಷ್ಣುತೆಯಿಂದ ಬದುಕುವ ವಾತವರಣ ನಮ್ಮ ನಡುವೆ ಸೃಷ್ಟಿಯಾಗಬೇಕು' ಎಂದು ಕರ್ನಾಟಕ ರಾಜ್ಯ ಮುಖ್ಯ ಆಯುಕ್ತ ಶ್ರೀ ಪಿ.ಜಿ.ಆರ್. ಸಿಂಧಿಯಾ ನುಡಿದರು.

ಅವರು ರಾಷ್ಟ್ರ ಹಾಗೂ ರಾಜ್ಯ ಸಂಸ್ಥೆಗಳ ವತಿಯಿಂದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ನಡೆಯುತ್ತಿರುವ ಐದು ದಿನಗಳ ರೊಬೊಟಿಕ್ಸ್, ಕೃತಕ ಬುದ್ದಿಮತ್ತೆ, ಯುವ ಉದ್ಯಮಶೀಲತೆ ಹಾಗೂ ಸ್ಟೆಮ್ ವಿಷಯಗಳನ್ನು ಒಳಗೊಂಡ ರಾಷ್ಟ್ರೀಯ ಮಟ್ಟದ ಕಾರ್ಯಗಾರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಂಗಳೂರು ವಿ.ವಿ ಕುಲಪತಿ ಪ್ರೊ. ಪಿ.ಎಲ್. ಧರ್ಮರವರು 'ಶಿಸ್ತು, ಸೇವಾ ಮನೋಭಾವ, ನೇತೃತ್ವ ಹಾಗೂ ಸಾಮಾಜಿಕ ಜವಾಬ್ದಾರಿ, ರಾಷ್ಟ್ರೀಯ ಏಕತೆಯನ್ನು ಮೂಡಿಸುತ್ತಿರುವ ಸ್ಕೌಟ್ಸ್ ಆಂದೋಲನ ಯುವಜನತೆಯಲ್ಲಿ ಇನ್ನಷ್ಟು ಜವಾಬ್ದಾರಿ ಹಾಗೂ ಬದ್ಧತೆಯನ್ನು ಬೆಳಸಲಿ' ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ಶ್ರೀ ವಿವೇಕ ಆಳ್ವ 'ಸ್ಕೌಟ್ಸ್ ಚಟುವಟಿಕೆಗಳ ಮೂಲಕ ಸಮಾಜಕ್ಕೆ ಹಿಂತಿರುಗಿ ಕೊಡುವ ಮನೋಭಾವ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ನಿಷ್ಠೆ ಹಾಗೂ ನಿರಂತರ ಪ್ರಯತ್ನದಿಂದ ಮಾತ್ರ ಸಾಧನೆ ಸಾಧ್ಯ' ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ನವದೆಹಲಿಯ ಮಾಜಿ ನಿರ್ದೇಶಕ ಶ್ರೀ ಕೃಷ್ಣಸ್ವಾಮಿ ರಾಮಮೂರ್ತಿ ಮಾತನಾಡಿ 'ವಿದ್ಯಾರ್ಥಿಗಳು ತಮ್ಮನ್ನು ಸಬಲಗೊಳಿಸಿಕೊಂಡ ಬಳಿಕ ಇತರರನ್ನು ಪ್ರೇರೇಪಿಸಲು ಮುಂದಾಗಬೇಕು, ಯುವ ಸಮುದಾಯ ತಮ್ಮ ಶಕ್ತಿಯನ್ನು ಅರಿತುಕೊಂಡು ಅದನ್ನು ಸಮಾಜದ ಹಿತಕ್ಕೆ ಬಳಸಬೇಕು' ಎಂದುರು.

ಶಿಬಿರದ ನಾಯಕ ಶ್ರೀ ಅನೆಲೇಂದ್ರ ಶರ್ಮ ಸ್ವಾಗತಿಸಿ, ರಾಜ್ಯ ಸಂಘಟನಾ ಆಯುಕ್ತ ಶ್ರೀ ಎಂ. ಪ್ರಭಾಕರ ಭಟ್ ವಂದಿಸಿ, ರೇಂಜರ್ ಲೀಡರ್ ಶ್ರೀಮತಿ ದೀಪಿಕಾ ಕಾರ್ಯಕ್ರಮ ನಿರೂಪಿಸಿದರು. ಅಸ್ಸಾಂನ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.







# ರಾಜ್ಯ ಸಂಸ್ಥೆಗೆ ರಾಷ್ಟ್ರೀಯ ಮಟ್ಟದ
# 'ಮೆಸೆಂಜರ್ ಆಫ್ ಪೀಸ್ ಸ್ಟಾರ್ ಪ್ರಶಸ್ತಿ 2023




ಅಕ್ಟೋಬರ್ 26ರಂದು ಮೂಡಬಿದಿರೆಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕನ್ನಡ ಭವನದಲ್ಲಿ ರಾಷ್ಟ್ರೀಯ ಸಂಸ್ಥೆ, ಕರ್ನಾಟಕ ರಾಜ್ಯ ಸಂಸ್ಥೆ, ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಮೂಡುಬಿದಿರೆ ಸ್ಥಳೀಯ ಸಂಸ್ಥೆ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ ಮಟ್ಟದ 'ಮೆಸೆಂಜರ್ ಆಫ್ ಪೀಸ್ ಸ್ಟಾರ್ ಪ್ರಶಸ್ತಿ 2023' ಹಾಗೂ ರಾಷ್ಟ್ರಪತಿ ಪುರಸ್ಕಾರ – 2016 ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಮಾತನಾಡಿ "ಸ್ಕೌಟ್ಸ್–ಗೈಡ್ಸ್‌ಗಳು ಶ್ರೀ ಮಲೆ ಮಹದೇಶ್ವರ, ಹಾಸನಾಂಬಾ, ಶ್ರೀ ಸಿದ್ಧೇಶ್ವರ ಸ್ವಾಮಿ ಜಾತ್ರೆ ಹಾಗೂ ಉಡುಪಿ ಪರ್ಯಾಯದ ಸಂದರ್ಭದಲ್ಲಿ ಸ್ವಯಂಸೇವಕರಾಗಿ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಡಾ. ಎಂ. ಮೋಹನ್ ಆಳ್ವರ ಮುಂದಾಳತ್ವದಲ್ಲಿ ಮೂಡುಬಿದಿರೆ ಹಾಗೂ ಗುರುಪುರದಂತಹ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಸುಸಜ್ಜಿತ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಮೂಡಿಬಂದಿದೆ" ಎಂದರು.

ಅಂತರರಾಷ್ಟ್ರೀಯ ಆಯುಕ್ತ (ಸ್ಕೌಟ್ಸ್) ಶ್ರೀ ಮಧುಸೂಧನ ಅವಾಲ ಮಾತನಾಡಿ "ಸ್ಕೌಟ್ ಹಾಗೂ ಗೈಡ್ ನಾಯಕನಾದವನು ಯಾವುದನ್ನಾದರೂ ಸಾಧಿಸಬಹುದು, ಆದರೆ ಎಲ್ಲರೂ ಸ್ಕೌಟ್ ಹಾಗೂ ಗೈಡ್ ನಾಯಕನಾಗಲು ಸಾಧ್ಯವಿಲ್ಲ. ಸ್ಕೌಟಿಂಗ್ ಮತ್ತು ಗೈಡಿಂಗ್ ಸಮುದ್ರದ ತೀರದಂತೆ – ಅದು ಒಳ್ಳೆಯದಾಗಲಿ ಕೆಟ್ಟದಾಗಲಿ ಎಲ್ಲವನ್ನೂ ಸ್ಪರ್ಶಿಸುತ್ತದೆ. ಅನುಭವವೇ ನಮ್ಮ ಶಿಕ್ಷಕ. ಸ್ಕೌಟ್ಸ್ ಹಾಗೂ ಗೈಡ್ಸ್ ವಿನಮ್ರತೆ, ಪ್ರಾಮಾಣಿಕತೆ, ನಿಷ್ಠೆ ಮತ್ತು ವಿಶ್ವಾಸಾರ್ಹತೆಯ ಗುಣಗಳಿಂದ ವಿಶಿಷ್ಟತೆಯನ್ನು ಪಡೆಯಲು ಸಾಧ್ಯ" ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನವದೆಹಲಿಯ ಮಾಜಿ ನಿರ್ದೇಶಕ ಶ್ರೀ ಕೃಷ್ಣಸ್ವಾಮಿ ರಾಮಮೂರ್ತಿ ಮಾತನಾಡಿ "ನಮ್ಮ ಅಗತ್ಯ 200 ಗ್ರಾಂ ಅಟ್ಟಾ (ಆಹಾರ) ಇದ್ದರೂ ನಾವು ಅರಮನೆ ಕಟ್ಟುವ ಹುಮ್ಮಸ್ಸಿನಲ್ಲಿ ತೊಡಗಿದ್ದೇವೆ. ಇದರಿಂದ ಪ್ರಯೋಜನವಿಲ್ಲ. ಶಾಂತಿ ಸಂಪತ್ತಿನಿಂದಲ್ಲ, ಮೌಲ್ಯ ಹಾಗೂ ಸೇವೆಯಿಂದ ನಿರ್ಮಾಣವಾಗುತ್ತದೆ" ಎಂದರು.

ದೇಶದಾದ್ಯಂತ 'ಮೆಸೆಂಜರ್ ಆಫ್ ಪೀಸ್ ಸ್ಟಾರ್' ಪ್ರಶಸ್ತಿಗೆ (2023) ಆಯ್ಕೆಯಾದ 48 ಜನರಲ್ಲಿ 21 ಜನರು ಹಾಗೂ ರಾಷ್ಟ್ರಪತಿ ಪ್ರಶಸ್ತಿಗೆ (2016) ಆಯ್ಕೆಯಾದ ದಕ್ಷಿಣ ಕನ್ನಡ ಜಿಲ್ಲೆಯ 48 ಜನರಲ್ಲಿ 25 ಮಂದಿಯನ್ನು ಈ ಸಮಾರಂಭದಲ್ಲಿ ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಚಟುವಟಿಕೆ, ಕಾರ್ಯಕ್ರಮ, ಶಿಬಿರ ಇನ್ನಿತರ ಮಾನದಂಡದ ಆಧಾರದಲ್ಲಿ ಕೊಡಮಾಡುವ 2023ನೇ ಸಾಲಿನ ರಾಷ್ಟ್ರೀಯ ಮಟ್ಟದ 'ಮೆಸೆಂಜರ್ ಆಫ್ ಪೀಸ್ ಸ್ಟಾರ್' ಪ್ರಶಸ್ತಿಗೆ ಕರ್ನಾಟಕ ರಾಜ್ಯ ಆಯ್ಕೆಯಾಗಿದ್ದು. ಪ್ರಶಸ್ತಿಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಸ್ವೀಕರಿಸಿದರು. ರೋವರ್ ಲೀಡರ್ ಶ್ರೀ ಅಭಿನೇಷ್ ಕುಮಾರ್ ಕಾರ್ಯಕ್ರಮ ನಿರೂಪಿಸಿದರು.







**DR. APJ ABDUL KALAMJI**
Hon. President of India
Decorates the SILVER STAR
On 11th July 2007


# R. CHANDRASEKHARAN, M.Sc.,(Ag.)

**Retd. Asst. Director, (Horticulture) Govt. of Karnataka**
**Leader Trainer, Bharat Scouts & Guides**

**M : +91 91106 41037**
**Res.: 1040, "Prahari", 27th Main, 9th Block**
**Jayanagara, Bengaluru - 560 069**


28.9.25

ಸನ್ಮಾನ್ಯ ರಾಜ್ಯ ಮುಖ್ಯರೇ, ವಂದನೆಗಳು.

ತಮ್ಮ ಇತ್ತೀಚಿನ ಜನ್ಮದಿನ (19.9.25) ಶುಭಕಾಮನೆಗಳು. ಇದರೊಡನೆ
ನಮ್ಮೆಲ್ಲರಿಗೆ ಮುದಿಯಲ್ಲ ಸತ್ಕರಿಸಿದ ದಿನದ (26.9.25) ಅನುಪಮ ವಿಧಾನಕ್ಕೆ
ಮೆಚ್ಚುಗೆ ಸೂಸಿ, ಧನ್ಯತೆಯ ಹೇಳ್ವ, ಸಕಲ ತರಬೇತುದಾರರೊಡನಾಡಿ ನಮಿಸುವೆನ್;
ಶ್ರೀ ಚಾಮುಂಡಾಂಬೆಯ ಕೃಪೆ ಚಿರವಿರಲಿ, ರಕ್ಷಿಸಲಿ;
ಭಾಗ್ಯವ ಧರಿಸುತಿರಲಿ, ಭಾರತಿಯ ದಯೆಯಿರಲಿ,
ಸಕಲ ಪರಿವಾರಕ್ಕೆ, ಆಯುರಾರೋಗ್ಯ ಮತ್ತು ಆನಂದ ಹಾರೈಸುವೆನ್;
ಇಂತು, ಹಿತವರಾದ ತಮಗೆ, ಸ್ಕೌಟಿಂಗ್ ಪರಿವಾರದ ಹಿರಿಯನಾದ,

[signature] 28/9/25

ಈ ಪರಿಯ ನಾಯಕ ಮನೋಯನನ್ನಿತ ನೇತಾರರ ನಾ ಕಾಣೆ;
ಭೂಪೆನಾ ಹೆಸರದು ಸಿರಿಸಿಂಧು; ಕೀರ್ತಿ ಶಿಖರ ಹೊತ್ತ ಹಸನ ಜಗದ್ವಂದ್ಯ;
ಸ್ಕೌಟಿಂಗ್ ಮುನ್ನಡೆಸೆ ಚುಕ್ಕಾಣಿ ಹಿಡಿದ ನೇತ | ಎಲ್ಲರನು ಗೌರವಿಸಿ, ಕೈ ಹಿಡಿದು ನಡೆಸುವ ನೇತ;
ರಾಜಕಾಲವ ನೆನಪಿಸುವ ರೀತಿ ನಡೆದಿಹನು | ವಿಶಾಲ ಮನಸನಾಗಿ ಸಂಸ್ಥೆಯ ನಿರ್ವಹಿಸುತಿಹನು;
ರಾಜ ಹೊಸತು ಮತ್ತೆ ಗಾದಿಯೊಳಿರಿಸಿ | ಜಿಲ್ಲೆ ಜಿಲ್ಲೆಗೆ B.P. ಪರಿವಾರ ಹೆಚ್ಚಿಸಿ;
ಸ್ಕೌಟ್ ಗೈಡ್ ಡಿಂಡಿಮವ ಮೂಲೆ ಮೂಲೆಯೊಳು ಮೊಳಗಿಸುವರು;
ಇವರಿಗೆ ಪರೇ ಸಾಟಿ, ಮರೆಯದಿರಿ; ಮರೆಯದಿರಿ;
ಎಲ್ಲರಭಿಪ್ರಾಯಕೆ ಮನ್ನಣೆ ನೀಡಿ | ತನ್ನದನೂ ಸೇರಿಸಿ ಕಾರ್ಯಕ್ರಮ ಮಾಡಿ;
ಎಲ್ಲೆಲ್ಲೂ ಹರಡಿ, ಮಕ್ಕಳ ಹಿರಿಯರೊಡಗೂಡಿ ಮುನ್ನಡೆಪ ನೇತ | ಸ್ಕೌಟಿಂಗನ ನವನೀತ;
ಕಾರ್ಯಕ್ರಮ ಸಾಧಕರ ಗೌರವಿಸುವ ರೀತಿ ಭಿನ್ನ; ಮುನ್ನಿನ ಬೆರಳೆಣಿಕೆ ಕ್ರಮಕ್ಕಿನ್ನ!
ಈ ಮುಖ್ಯರಿಂದು ಆಚರಿಸಿ ತೋರ್ದ ರೀತಿ, ಭಿನ್ನವಾದರೂ ಮಿನ್ನ; ಇವರಿಗೆ ಪರೇ ಸಾಟಿ, ಇದರ ಸವಿ ನೋಡಬೇಕಿನ್ನ;
ಸಿಂಧ್ಯರ ಮುನ್ನೋಟ ಮೆರೆದು ಮುನ್ನಡೆಯಲಿ | ಗಳಿಸಿದ ನಾಮ ಮನ ಪ್ರೈಝ್ ದೇದೀಪ್ಯಮಾನ ಬೆಳಗಲಿ;
ಅಸಾಧ್ಯವೆಂಬುದನು ಪಿಟ್ಟಿಸಂಧಿಹ ನೇತ | ಸಾಧಿಸಿ ತೋರುತಿಹ ನೇತನ ಜಾಡು ಹಿಡಿಯ ಬನ್ನಿ;

— ರಾಮಚಂದ್ರ.


**Professional:**
Horticultural Supervisor, ITI Ltd., Dooravaninagara, Bengaluru-560016
Garden Superintendent, BEL, Jalahalli, Bengaluru-560013
Estate Manager, Rishi Valley School, Rishivalley Post, Chittoor Dist. (A.P.)

**Bharat Scouts & Guides:**
Estate Manager, (ANTC), National Training Centre, Pachmarhi (MP)
Regional Organising Commissioner , WRHQs
Assistant Director, ERHQs, Patna, Ahmedabad
Hqs. Commissioner (Publications) Karnataka State
Advisor Trustee, Chamundi Scout Group, Malleshwaram, Bengaluru-03
Vice-President, Bengaluru North District, Chamundi Scout Rasthe, Malleshwaram, Bengaluru-03

# JOTA-JOTI JAMBOREE ON THE AIR / JOMBOREE ON THE INTERNET

ಅಕ್ಟೋಬರ್ 18 ಮತ್ತು 19 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ರಾಜ್ಯ ಸಂಸ್ಥೆ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ಹಾಗು ಬೆಂಗಳೂರು ಅಮೆಚೂರ್ ರೇಡಿಯೋ ಕ್ಲಬ್ ಸಹಯೋಗದಲ್ಲಿ ರಾಜ್ಯ ಕೇಂದ್ರ ಕಾರ್ಯಾಲಯ ಬೆಂಗಳೂರು ಇಲ್ಲಿ JOTA-JOTI Jamboree On The Air / Jomboree On the Internet ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ಶುಭಹಾರೈಸಿ ಹ್ಯಾಮ್ ರೇಡಿಯೋ ಜೀವನದಲ್ಲಿ ಮತ್ತು ಸ್ಕೌಟ್ಸ್–ಗೈಡ್ಸ್ ಸಂಸ್ಥೆಗೆ ಬಹಳ ತುಂಬಾ ಅವಶ್ಯ ಇದರ ತರಬೇತಿಯು ಎಲ್ಲಾರೂ ಪಡೆದುಕೊಳ್ಳಲು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಬೆಂಗಳೂರು ಅಮೆಚೂರ್ ರೇಡಿಯೋ ಕ್ಲಬ್ ಸದಸ್ಯರುಗಳಾದ ಶ್ರೀ ಮೋಹನ್ .ಕೆ, ಶ್ರೀ ಸುಧಾಕರ್, ಶ್ರೀ ಪ್ರಮೋದ್ ಇವರ ತಂಡ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ವಿವಿಧ ಶಾಲೆಗಳ ಸುಮಾರು 280ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ದಳನಾಯಕರುಗಳು ಭಾಗವಹಿಸಿದ್ದರು.









ರಾಜ್ಯ ಸಂಸ್ಥೆಯಿಂದ ಕೊಡಗು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳಿಗೆ ಹಾಗೂ ದಳನಾಯಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

# CONGRATULATIONS



**Mr. Jitesh Sheth**

*Headquarter Commissioner, BS&G, Karnataka and Deputy National Commissioner (R), BS&G, India is Appointed as a member of APR Governance Sub Committee for the period 2025-2028.*



**Mr. Satyajit Chatterjee,**

*District Training Commissioner (S), Bharat Scouts & Guides Bengaluru North District is appointed as a Member of APR Diversity & Inclusion Sub Committee for the Period 2025 to 2028.*



*Sri Shashank Dwarakanath Murki representing the Bharat Scouts and Guides, India is elected by the 11th Asia Pacific Regional Scout Youth Forum as a Regional Youth Representative of the Great Asia Pacific Region for the Triennium 2025-2028. He will serve as a Member of the Strategic Transformation Sub- Committee. He is Associated with the "Mafeking Rover Crew", Bangalore South District, Karnataka since 10 years.*

*He Serves as the voice of 37 Million scouts and 33 Countries of the Region. The Youth Forum involved 27 Participating National Scout Organisation and more than 125 Participants who had resourceful discussions of the future of Scouting and Changes to be implemented.*

# ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಅಕ್ಟೋಬರ್ 2025ರಲ್ಲಿ ನಿರ್ವಹಿಸಲ್ಪಟ್ಟ ಮುಖ್ಯ ಕಾರ್ಯಚಟುವಟಿಕೆಗಳು

* ಅಕ್ಟೋಬರ್ 05 ರಂದು ಮಾನ್ಯ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಸ್ಕಿಲೋ 23ರ ಅಂಗವಾಗಿ ವಿಪತ್ತು ನಿರ್ವಹಣೆ ಪ್ರಾವಿಣ್ಯತಾ ಪದಕದ ಬಗ್ಗೆ ಡಾ. ಮಟಪಾಡಿ ಪ್ರಭಾತ್ ಕಲ್ಕೂರ ರವರ ಉತ್ತಮ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ರವರು ಮತ್ತು ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ದಳ ನಾಯಕರುಗಳು ಕಬ್ಸ್, ಬುಲ್–ಬುಲ್ಸ್ ಸ್ಕೌಟ್ಸ್–ಗೈಡ್ಸ್ ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.



* ಅಕ್ಟೋಬರ್ 06 ರಂದು ಬಿ.ಬಿ.ಎಂ.ಪಿ. ಜಿಲ್ಲಾ ಸಂಸ್ಥೆ ವತಿಯಿಂದ ದೊಡ್ಡಬಳ್ಳಾಪುರ ಡಾ. ಆನಿಬೆಸೆಂಟ್ ಸ್ಕೌಟ್ಸ್ ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಇಲ್ಲಿ ನಡೆಯುತ್ತಿರುವ 'ಪದಕ ತರಬೇತಿ ಶಿಬಿರ'ದ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ತರಬೇತಿ ಕೇಂದ್ರದ ಸಂಚಾಲಕರಾದ ಶ್ರೀ ಎಂ.ಎಂ. ಚೆಲ್ಲಯ್ಯ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಕೊಡಗು ಜಿಲ್ಲಾ ಸಂಸ್ಥೆಯಿಂದ ಮುಳ್ಳುಸೋಗೆ ಸರ್ಕಾರಿ ಶಾಲೆಯಲ್ಲಿ ಅಕ್ಟೋಬರ್ 03 ರಿಂದ 09ರ ವರೆಗೆ ಹಮ್ಮಿಕೊಳ್ಳಲಾಗಿದ್ದ ಮೂಲ ತರಬೇತಿ ಶಿಬಿರದಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಅಕ್ಟೋಬರ್ 07 ರಂದು ಪಾಲ್ಗೊಂಡು ಮಾತನಾಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಕುಶಾಲನಗರ ಸ್ಥಳೀಯ ಸಂಸ್ಥೆ ಹಮ್ಮಿಕೊಂಡಿದ್ದ, ನಿವೃತ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಿಗೆ ಗೌರವ ಸಮರ್ಪಣೆ ಹಾಗೂ ಸಮ್ಮಿಲನ ಕೂಟವನ್ನು ಏರ್ಪಡಿಸಲಾಗಿತ್ತು, ಈ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶಿಕ್ಷಕರುಗಳಿಗೆ ಸನ್ಮಾನಿಸಿ ಶುಭಹಾರೈಸಿದರು. ಈ ಕಾರ್ಯಕ್ರಮದಲ್ಲಿ ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಬಿ.ಕೆ ಬಸವರಾಜು, ಜಿಲ್ಲಾ ಮುಖ್ಯ ಆಯುಕ್ತಾರಾದ ಶ್ರೀ ಕೆ.ಟಿ. ಬೇಬಿಮ್ಯಾಥ್ಯೂ, ಜಿಲ್ಲಾ ಆಯುಕ್ತರುಗಳಾದ ಶ್ರೀ ಜಿಮ್ಮಿಸಿಕ್ವೇರಾ, ಶ್ರೀಮತಿ ರಾಣಿಮಾಚಮ್ಮ ಹಾಗೂ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಡಾ|| ಪ್ರವೀಣ್ ದೇವರಗುಂಡ ಸೋಮಪ್ಪ, ಕಾರ್ಯದರ್ಶಿ ಶ್ರೀ ಎಂ.ಎಸ್. ಗಣೇಶ್, ಶ್ರೀಮತಿ ಸುಲೋಚನಾ, ಶ್ರೀಮತಿ ವಾಸಂತಿ, ಶ್ರೀಮತಿ ದಮಯಂತಿ ಹಾಗೂ ಜಿಲ್ಲಾ ಪದಾಧಿಕಾರಿಗಳು ಕುಶಾಲನಗರ ಸ್ಥಳೀಯ ಸಂಸ್ಥೆಯ ಎಲ್ಲಾ  ಪದಾಧಿಕಾರಿಗಳು ಭಾಗವಹಿಸಿದ್ದರು.



* ಶ್ರೀ ಪಿ.ಜಿ.ಆರ್.ಸಿಂಧ್ಯ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರು ಅಕ್ಟೋಬರ್ 08 ರಂದು ಶ್ರೀಮತಿ ಹೊನ್ನಾಂಬ. ಎಸ್, ಭಾ.ಆ.ಸೇ. ಮಾನ್ಯ ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಬೆಂಗಳೂರು, ಶ್ರೀಮತಿ ಮಂಜುಳಾ, ತಹಶೀಲ್ದಾರ್ ರವರನ್ನು ಭೇಟಿ ಮಾಡಿ ಯುವ ಆಪದ್ ಮಿತ್ರ ತರಬೇತಿ ಶಿಬಿರದ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡ .ಕೆ, ಶ್ರೀಮತಿ ಲತಾ ಮಂಜುನಾಥ್, ಶ್ರೀ ಎಂ. ಪ್ರಭಾಕರ್ ಭಟ್ ಉಪಸ್ಥಿತರಿದ್ದರು.

* ಅಕ್ಟೋಬರ್ 09 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಮಾರ್ಗದರ್ಶನದಲ್ಲಿ  ಮತ್ತು  ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ  ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಮಾಸ ಪತ್ರಿಕೆ ಶತಮಾನೋತ್ಸವ ಕಾರ್ಯಕ್ರಮದ ಪೂರ್ವ ಸಿದ್ದತಾ ಸಭೆಯನ್ನು ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಮಾಸ ಪತ್ರಿಕೆ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ವಿಶೇಷ ಸ್ಮರಣೆ ಸಂಚಿಕೆಯನ್ನು ಬಿಡುಗಡೆ ಮಾಡುವ ಬಗ್ಗೆ, ಕಾರ್ಯಕ್ರಮ ಸಂಘಟಿಸಲು ಸ್ಥಳ ಮತ್ತು ದಿನಾಂಕ ನಿಗದಿ ಪಡಿಸುವ ಬಗ್ಗೆ, ಸ್ಮರಣ ಸಂಚಿಕೆ ಜಾಹೀರಾತು, ವಿವಿಧ ಹಂತದ ನಾಯಕರುಗಳಿಂದ ಶುಭ ಸಂದೇಶ ಸಂಗ್ರಹಿಸುವ ಬಗ್ಗೆ ಮತ್ತು ಸ್ಮರಣ ಸಂಚಿಕೆಯಲ್ಲಿ ವಿಶೇಷ ಪುಟಗಳ ಪ್ರಕಟಿಸುವ ಬಗ್ಗೆ ಸಮಗ್ರವಾಗಿ ಚರ್ಚಿಸಿ ತೀರ್ಮಾನಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಆಯುಕ್ತರಾದ ಶ್ರೀಮತಿ ಗೀತ ನಟರಾಜ್, ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪ ಗೌಡ, ರಾಜ್ಯ ಸಹಾಯಕ



ಆಯುಕ್ತರು ಹಾಗೂ ಸ್ಮರಣ ಸಂಚಿಕೆ ಸಮಿತಿ ಸಂಪಾದಕರಾದ ಶ್ರೀಮತಿ ಮುಕ್ತಾ ಬಿ. ಕಾಗಲಿ, ಸಹಾಯಕ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ಶ್ರೀಮತಿ ರಾಧ ವೆಂಕಟೇಶ್, ಶ್ರೀ ಸಿ.ವಿ. ತಿರುಮಲ ರಾವ್, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳ .ಸಿ, ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಕೆ.ಹೆಚ್. ಜಯರಾಮಯ್ಯ ಹಾಗೂ ಮುಂತಾದವರು ಭಾಗವಹಿಸಿದ್ದರು.



* ಅಕ್ಟೋಬರ್ 09 ರಂದು ಭಾರತ್ ಸ್ಕೌಟ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರದಲ್ಲಿ, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ರವರು ಆಯೋಜಿಸಿದ್ದ ವಿಶ್ವ ದಾಖಲೆಯ ರಾಜ್ಯಮಟ್ಟದ ಪ್ರಥಮ ಟೆಲಿಸ್ಕೋಪ್ ತರಬೇತಿ ಶಿಬಿರ, 'ನಾನು ವಿಜ್ಞಾನಿ 2025' ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಮಾನ್ಯ ಶ್ರೀ ಥಾವರ್ ಚಂದ ಗೆಲ್ಲೋಟ್ ಹಾಗೂ ಮಾಜಿ ಇಸ್ರೋ ಅಧ್ಯಕ್ಷರಾದ ಡಾ॥ ಎ.ಎಸ್. ಕಿರಣ್ ಕುಮಾರ್. ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ನಾಗ ಮೋಹನ್‌ದಾಸ್, ಶಾಸಕರಾದ ಶ್ರೀ ಧೀರಜ್ ಮುನಿರಾಜ್, ಡಾ. ಕೆ.ಎಸ್ ವಿಜಯ ಪ್ರಕಾಶ್, ಡಾ. ಹುಲಿಕಲ್ ನಟರಾಜ್ ಹಾಗೂ ಅಪಾರ ಸಾರ್ವಜನಿಕರು ವಿವಿಧ ಜಿಲ್ಲೆಗಳಿಂದ ಆಗಮಿಸಿದಂತಹ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಅಕ್ಟೋಬರ್ 10 ರಂದು ರಾಜ್ಯ ಸಂಸ್ಥೆ ವತಿಯಿಂದ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಕಾರ್ಯಕ್ರಮಗಳನ್ನು ಉದ್ದೇಶಿಸಿ ಬೆಂಗಳೂರು ಪ್ರೆಸ್ ಕ್ಲಬ್ ನಲ್ಲಿ ಪ್ರತಿಕಾ ಗೋಷ್ಠಿಯಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ರಾಜ್ಯ ಆಯುಕ್ತರು ವಯಸ್ಕ ಸಂಪನ್ಮೂಲ ಶ್ರೀಮತಿ ರಾಮಲತಾ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್, ಶ್ರೀಮತಿ ಮಂಜುಳಾ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ನಾಗೇಶ್ ಆರ್. ಶಿವಪೂರ್, ಶ್ರೀಮತಿ ಶಾಮಲ, ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಕೆ.ಹೆಚ್. ಜಯರಾಮಯ್ಯ, ಶ್ರೀ ಲಕ್ಷ್ಮೀಶ್, ಶ್ರೀಮತಿ ಕುಮಾರಿ ಹೊನ್ನಮ್ಮ, ಶ್ರೀ ಶಿವಕುಮಾರ ಸ್ವಾಮಿ, ಶ್ರೀ ವಿಶ್ವನಾಥ. ವಿ ಮುಂತಾದವರು ಉಪಸ್ಥಿತರಿದ್ದರು.







* ಅಕ್ಟೋಬರ್ 10 ರಂದು ರೇಸ್ ಶಿಕ್ಷಣ ಸಂಸ್ಥೆಗಳು, ಶಾರದಾನಗರ, ಬೆಂಗಳೂರು ಇಲ್ಲಿ ಹೊಸದಾಗಿ ಪ್ರಾರಂಭವಾಗುತ್ತಿರುವ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್ ಮುಕ್ತದಳ (Open Unit) ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರು ಉದ್ಘಾಟನೆ ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಕಾರ್ಯಕ್ರಮಗಳು ಮತ್ತು ಯುವ ಜನತೆಗೆ ಇರುವ ಸಾಮಾಜಿಕ ಮತ್ತು ಸದಾವಕಾಶದ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶಾಲೆಯ ಆಡಳಿತ ಮಂಡಳಿ, ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



* ಅಕ್ಟೋಬರ್ 11 ರಂದು ಅನ್ವೇಷಣಾ ಸೇವಾ ಟ್ರಸ್ಟ್ (ರಿ)., ಮೈಸೂರು ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾ ರವರ 77ನೇ ಹುಟ್ಟುಹಬ್ಬದ ಸಂಭ್ರಮದಲ್ಲಿ 'ಧ್ವನಿ ಕೊಟ್ಟ ದಣಿ' ಪ್ರಶಸ್ತಿ ಪ್ರಧಾನವನ್ನು ಮಾಡಿರುತ್ತಾರೆ. ಪರಮ ಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಕ್ಷೇತ್ರ ಸುತ್ತೂರು ರವರ ದಿವ್ಯ ಸಾನಿಧ್ಯದಲ್ಲಿ ಶ್ರೀ ತನ್ವೀರ್ ಸೇಟ್, ವಿಧಾನಸಭಾ ಸದಸ್ಯರು, ಶ್ರೀ ಎಂ. ಶಿವಣ್ಣ, ಮಾಜಿ ಸಚಿವರು, ಶ್ರೀ ವೆಂಕಟೇಶ್, ಉಪಾಧ್ಯಕ್ಷರು, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್, ಶ್ರೀ ಎಂ.ಜಿ.ಆರ್ ಅರಸ್ ಡಾ. ಆರ್. ದೀಪು, ಅಧ್ಯಕ್ಷರು, ದ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಮೈಸೂರು ರವರು ಪ್ರಶಸ್ತಿ ಪ್ರಧಾನವನ್ನು ಮಾಡಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀ ಪಿ.ಜಿ.ಆರ್ ಸಿಂಧ್ಯಾ ರವರಿಗೆ ಸನ್ಮಾನವನ್ನು ಮಾಡಲಾಯಿತು.



* ಅಕ್ಟೋಬರ್ 14 ರಂದು ಶ್ರೀ ಅಶೋಕ್ ದಾಸ್ ಗುಪ್ತ ಪ್ರಾದೇಶಿಕ ನಿರ್ದೇಶಕರು ಮೈ ಭಾರತ್ ಕರ್ನಾಟಕ ಇವರು ರಾಜ್ಯ ಸಂಸ್ಥೆಗೆ ಭೇಟಿ ನೀಡಿ ಕಾರ್ಯಕ್ರಮಗಳು ಮತ್ತು ಯುವ ಆಪದ್ ಮಿತ್ರ ತರಬೇತಿ ಶಿಬಿರಗಳ ಬಗ್ಗೆ ಚರ್ಚಿಸಿದರು. ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಸಂಸ್ಥೆಯ ಮಾಹಿತಿ ನೀಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ ಷಣ್ಮುಖಪ್ಪ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಸಿ. ಮಂಜುಳಾ, ಎ.ಎಸ್.ಓ.ಸಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಯುವ ಆಪದ್ ಮಿತ್ರ ಯೋಜನೆ ಸಂಯೋಜಕರಾದ ಶ್ರೀಮತಿ ಲತಾ ಮಂಜುನಾಥ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.



**A meaningful discussion was held under the chairmanship of State Chief Commissioner Sri PGR Sindhia on the topic "Integration of Artificial Intelligence (AI) in Scouting. on October 24th at State Headquarters, Shanthigruha, Bengaluru-01. Dr. Savita Bastawadi and AI Scientist Sri Kawal Arora shared insightful information about the role and future of Artificial Intelligence in the Scouting movement. On this occasion State Secretary Sri K. Gangappa Gowda, Sri M.A. Chelliah, Sri L.T. Lokesh Smt. C. Manjala, Smt. K.V. Shamala, Sri. K.H. Jayaramayya, Sri V. Vishwanath and others were present.**

* ಅಕ್ಟೋಬರ್ 25 ರಂದು ಜಿಲ್ಲಾ ಸಂಸ್ಥೆ ಶಿವಮೊಗ್ಗ ಕೇಂದ್ರ ಕಚೇರಿಯಲ್ಲಿ ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಅನುದಾನಿತ, ಅನುದಾನ ರಹಿತ, ಪದವಿಪೂರ್ವ ಕಾಲೇಜುಗಳ ಉಪನ್ಯಾಸಕ – ಉಪನ್ಯಾಸಕಿಯರುಗಳಿಗೆ ಒಂದು ದಿನದ ರೋವರ್ 'ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಪ್ರಾರಂಭಿಕ ಶಿಬಿರ'ದಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಶಕುಂತಲಾ ಚಂದ್ರಶೇಖರ್ ರವರು ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಚಂದ್ರಪ್ಪ ಎಸ್. ಗುಂಡಪ್ಪಲ್ಲಿ ಉಪ ನಿರ್ದೇಶಕರು, ಶ್ರೀ ಎಸ್. ಪಂಡರಿನಾಥ, ಸರ್ಕಾರಿ ಪದವಿ ಪೂರ್ವ ಕಾಲೇಜು ಅಧ್ಯಕ್ಷರು. ಶ್ರೀ ಕೆ.ವಿ. ಚಂದ್ರಶೇಖರಯ್ಯ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಮನ್ ಶೇಖರ್ ರವರು ಎ.ಎಸ್.ಓ.ಸಿ. ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಅಭಿನಂದನೆಗಳು.....



**ಶ್ರೀ ಧರಣೇಶ್,** ರೋವರ್ ಸ್ಕೌಟ್ ಲೀಡರ್ ಎಸ್.ಎ.ಜಿ.ಬಿ. ಪದವಿ ಪೂರ್ವ ಕಾಲೇಜು, ದಾವಣಗೆರೆ ಇವರಿಗೆ ವಿವೇಕ ಚೇತನ ಚಾರಿಟಬಲ್ ಟ್ರಸ್ಟ್ ಬೆಂಗಳೂರು ವತಿಯಿಂದ **'ಗುರುಶ್ರೀ ಪ್ರಶಸ್ತಿ'** ಲಭಿಸಿದೆ. ಇವರಿಗೆ ಜಿಲ್ಲಾ ಸಂಸ್ಥೆ ಮತ್ತು ರಾಜ್ಯ ಸಂಸ್ಥೆ ಪದಾಧಿಕಾರಿಗಳು ಅಭಿನಂದನೆ ಸಲ್ಲಿಸುತ್ತಾರೆ.

## ಅಭಿನಂದನೆಗಳು.....



ಯುವ ಆಪದ್ ಮಿತ್ರ ತರಬೇತಿ ಪಡೆದ ರೋವರ್ **ಕು. ನಾಗರಾಜ** ಮುಕ್ತದಳ ಸಾ: ಯರಮರಸ್, ತಾ: ದೇವದುರ್ಗ, ಜಿ: ರಾಯಚೂರು ಇವರು ತಮ್ಮ ಊರಿನಲ್ಲಿ ಒಂದು ಮನೆಯಲ್ಲಿ ಪಟಾಕಿ ಸಿಡಿಮದ್ದಿನಿಂದ ಮನೆಯಲ್ಲಿರುವ ಹತ್ತಿಗೆ ಬೆಂಕಿ ಹೊತ್ತಿಕೊಂಡು ಉರಿಯುತ್ತಿತ್ತು, ವಿಪತ್ತು ನಿರ್ವಹಣಾ ತರಬೇತಿ ಪಡೆದ ರೋವರ್ ತಕ್ಷಣ ಹತ್ತಿರುವ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾನೆ ಈ ರೋವರ್ ವಿದ್ಯಾರ್ಥಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ತುಂಬು ಹೃದಯದ ಅಭಿನಂದನೆಗಳು.



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಅಕ್ಟೋಬರ್ 02 ರಂದು 71ನೇ ವನ್ಯಜೀವಿ ಸಂರಕ್ಷಣಾ ವಾರದ ಅಂಗವಾಗಿ ಕರ್ನಾಟಕ ಅರಣ್ಯ ಇಲಾಖೆಯ ವತಿಯಿಂದ ವಿಧಾನಸೌಧದಿಂದ ಲಾಲ್‌ಬಾಗ್‌ವರೆಗೆ ನಡೆದ ಜಾಗೃತಿ ರ್‍ಯಾಲಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆ ವತಿಯಿಂದ 80 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ದಳನಾಯಕರುಗಳು ಭಾಗವಹಿಸಿದರು. ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್, ಅರಣ್ಯ ಸಚಿವರಾದ ಶ್ರೀ ಈಶ್ವರ ಖಂಡ್ರೆ ಹಾಗೂ ಅರಣ್ಯ ಇಲಾಖೆಯ ಬ್ರಾಂಡ್ ಅಂಬಾಸಿಡರ್‌ರಾದ ಶ್ರೀ ಅನಿಲ್ ಕುಂಬ್ಳೆ ಅವರ ಸಾನ್ನಿಧ್ಯದಲ್ಲಿ ರ್‍ಯಾಲಿಗೆ ಚಾಲನೆ ನೀಡಲಾಯಿತು. "Save Wildlife, Save Earth and Protect Forests, Protect Future" ಎಂಬ ಘೋಷಣೆಗಳೊಂದಿಗೆ ರ್‍ಯಾಲಿಯಲ್ಲಿ ಭಾಗವಹಿಸಲಾಯಿತು.



* ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ವತಿಯಿಂದ ತಾಲ್ಲೂಕು ಮಟ್ಟದ ಕ್ರಿಕೆಟ್ ಪಂದ್ಯಾವಳಿಯನ್ನು ಅಕ್ಟೋಬರ್ 11 ಮತ್ತು 12 ರಂದು ಸಂತ ಅಂಥೋಣಿ ಪಬ್ಲಿಕ್ ಶಾಲೆ, ಟಿ.ಸಿ. ಪಾಳ್ಯದಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಬಿ.ಎ. ಬಸವರಾಜು, ಶಾಸಕರು ಮತ್ತು ಮಾಜಿ ಸಚಿವರು ನಗರಾಭಿವೃದ್ಧಿ ಕೆ.ಆರ್.ಪುರಂ ಕ್ಷೇತ್ರ, ಶ್ರೀ ಪಿ.ಜಿ. ಅಂಥೋಣಿಸ್ವಾಮಿ, ಮಾಜಿ ಕಾರ್ಪೋರೇಟರ್, ಶ್ರೀ ಬಿ.ಎಂ. ಚಂದ್ರಶೇಖರ್ ಅಧ್ಯಕ್ಷರು, ಕೆ.ಆರ್.ಪುರಂ ಸ್ಥಳೀಯ ಸಂಸ್ಥೆ, ಶ್ರೀ ಬಿ.ಎಂ. ವೆಂಕಟೇಶ್ ಎ.ಡಿ.ಸಿ.(ಎಸ್). ಶ್ರೀ ರವಿಕುಮಾರ್ ಕೆ.ಆರ್. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ವಿಜೇತ ತಂಡಗಳಿಗೆ ಬಹುಮಾನ ಮತ್ತು ಭಾಗವಹಿಸಿದ ತಂಡಗಳಿಗೆ ಪ್ರಮಾಣ ಪತ್ರವನ್ನು ನೀಡಿದರು.



* ವಿಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಅಕ್ಟೋಬರ್ 16 ರಂದು ಶ್ರೀ ಭಾರತಿ ವಿದ್ಯಾಲಯ ಶಾಲೆಯಲ್ಲಿ ಗೀತಾಗಾಯನ ಸ್ಪರ್ಧೆಯನ್ನು ಆಯೋಜನೆಯನ್ನು ಮಾಡಲಾಯಿತು. ಕು. ದೀಪ್ತಿ, ಶ್ರೀಮತಿ ಗೀತಾ ಸತ್ಯನಾರಾಯಣ್ ತೀರ್ಪುಗಾರರಾಗಿದ್ದರು. ಶ್ರೀ ಭಾರತಿ ವಿದ್ಯಾಲಯ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ವರ್ಷ ಎಸ್.ಎಸ್., ಶ್ರೀ ಸತ್ಯನಾರಾಯಣಭಟ್, ಶ್ರೀ ಭಾರತಿ ವಿದ್ಯಾಲಯ ಮುಖ್ಯಸ್ಥರು, ಶ್ರೀಮತಿ ದಾಕ್ಷಾಯಣಿ ಜಿಲ್ಲಾ ಪದಕ ಕಾರ್ಯದರ್ಶಿಗಳು (ಗೈಡ್), ಶ್ರೀ ಚಂದ್ರು ಪಿ. ಗೀತಾಗಾಯನ ಕಾರ್ಯಕ್ರಮಕ್ಕೆ ಭೇಟಿ ನೀಡಿದರು. ಶ್ರೀ ಟಿ. ಸಿದ್ದಗಂಗಯ್ಯ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ, 24 ದಳ ನಾಯಕರುಗಳು, 60 ಕಬ್, 60 ಬುಲ್‌ಬುಲ್, 80 ಸ್ಕೌಟ್ಸ್, 72 ಗೈಡ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.



## ಬೆಂಗಳೂರು ಉತ್ತರ

* ಅಕ್ಟೋಬರ್ 02 ರಂದು 71ನೇ ವನ್ಯ ಜೀವಿ ಸಪ್ತಾಹದ ಅಂಗವಾಗಿ ಕಾಲ್ನಡಿಗೆ ಕಾರ್ಯಕ್ರಮವನ್ನು ವಿಧಾನ ಸೌಧದಿಂದ ಲಾಲ್‌ಬಾಗ್‌ರವಗೆ ಹಮ್ಮಿಕೊಳ್ಳಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯಿಂದ 200 ರೋವರ್–ರೇಂಜರ್, ಸ್ಕೌಟ್ಸ್–ಗೈಡ್ಸ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಿಶ್ವಶಾಂತಿ ಪ್ರಯುಕ್ತ ಸಮುದಾಯ ಸೇವಾ ಕಾರ್ಯವನ್ನು ಗಂಟಿಗಾನಹಳ್ಳಿಯಲ್ಲಿ ಏರ್ಪಡಿಸಲಾಗಿತ್ತು. ಮುಖ್ಯವಾಗಿ ಸ್ವಚ್ಛತಾ ಕಾರ್ಯಕ್ರಮ ನಂದಿಯ ದಡದ ಸ್ವಚ್ಛತೆ ಮತ್ತು ಗಿಡದ ಸುತ್ತ ಬೆಳೆದ ಕಳೆಯನ್ನು ಸ್ವಚ್ಛತೆ ಮಾಡಲಾಯಿತು.



* ಗಾಂಧಿ ಜಯಂತಿ ಹಾಗೂ ಲಾಲ್ ಬಹುದ್ದೂರ್‌ರವರ ಜಯಂತಿಯನ್ನು ವಿವಿಧ ಶಾಲೆಗಳಲ್ಲಿ ಸರ್ವಧರ್ಮ ಪ್ರಾರ್ಥನೆ ಮತ್ತು ಸ್ವಚ್ಛತೆ ಮಾಡುವ ಮೂಲಕ ಆಚರಿಸಲಾಯಿತು.



* ಬೆಂಗಳೂರು ಉತ್ತರ ಜಿಲ್ಲೆಯ ರಾಜಾಜಿನಗರ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಅಕ್ಟೋಬರ್ 12 ರಂದು ವಿದ್ಯಮಾನ್ಯ ವಿದ್ಯಾ ಕೇಂದ್ರ, ಆಂದ್ರಹಳ್ಳಿ ಇಲ್ಲಿ ನಡೆಸಲಾಯಿತು. ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಶಶಿಧರ್ ಇವರು ಪರೀಕ್ಷೆಯಲ್ಲಿ ಭಾಗವಹಿಸುವ ಸ್ಕೌಟ್ಸ್–ಗೈಡ್ಸ್‌ಗೆ ಶುಭಾಶಯ ಕೋರಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ಇ.ಜಿ. ಅವರು ಶಿಬಿರವನ್ನು ಸಂಘಟಿಸಿದರು.



* ಐತಿಹಾಸಿಕ ಹಾಸನಾಂಬೆ ಸೇವಾ ಶಿಬಿರದಲ್ಲಿ ಮೊದಲ ಹಂತದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಿಂದ 150 ರೋವರ್–ರೇಂಜರ್ ಸೇವೆ ಸಲ್ಲಿಸಿರುತ್ತಾರೆ.



## ಬೆಂಗಳೂರು ಪೂರ್ವ

* ಬೆಂಗಳೂರು ಪೂರ್ವ ಜಿಗಣಿ ಸ್ಥಳೀಯ ಸಂಸ್ಥೆ ವತಿಯಿಂದ 2025–26ನೇ ಸಾಲಿನ ದೇಶದ ಭಕ್ತಿ ಗೀತೆಗಳ ಗಾಯನ ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್‌ರವರು ಮಾರ್ಗ ದರ್ಶನದಲ್ಲಿ ಹಾಗೂ ಜಿಗಣಿ ಸ್ಥಳೀಯ ಕಾರ್ಯದರ್ಶಿ ಶ್ರೀ ದೇವರಾಜಯ್ಯ ಇವರ ನೇತೃತ್ವದಲ್ಲಿ ಅಕ್ಟೋಬರ್ 24 ರಂದು ಸೆಂಟ್ ಜೋಸೆಫ್ ಜಿಗಣಿ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಲಕ್ಷ್ಮಿ ಎಂ. ಮತ್ತು ಸದರಿ ಶಾಲೆಯ ಕಬ್ ಮಾಸ್ಟರ್ ಶ್ರೀ ಮಾಲತೇಶ್‌ರವರು ಸಹಕಾರದೊಂದಿಗೆ ಶ್ರೀ ಮನುರವರ ಉಪಸ್ಥಿತಿಯಲ್ಲಿ ಸ್ಕೌಟರ್ ಮತ್ತು ಗೈಡರ್ ಕಬ್ ಮತ್ತು ಬುಲ್ ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಿ.ಆರ್.ಪಿ. ಶ್ರೀಮತಿ ರೀಟಾ ಮತ್ತು ಶ್ರೀಮತಿ ಪ್ರಮೀಳಾ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಸ್ಫೂರ್ತಿದಯಾಕ ಮಾತಾಡಿದರು. ನಂತರ ಶ್ರೀ ಮನುರವರು ಗೀತಾ ಗಾಯನ ಸ್ಪರ್ಧೆಯ ನಿಯಮಗಳನ್ನು ತಿಳಿಸಿದರು. ತೀರ್ಪುಗಾರರಗಿ ಸಂಗೀತ ಶಿಕ್ಷಕ ಶ್ರೀ ಯಲ್ಲಪ್ಪ ಕೊರಮರ್, ಶ್ರೀ ರಾಮಾನುಜಂರವರ ಉಪಸ್ಥಿತಿಯಲ್ಲಿ ತುಂಬಾ ಯಶಸ್ವಿಯಾಗಿ ಜರುಗಿತು. ಸುಮಾರು 120 ಹೆಚ್ಚು ವಿದ್ಯಾರ್ಥಿಗಳು 22 ತಂಡಗಳು ಭಾಗವಹಿಸಿದ್ದರು. ಸ್ಥಳದಲ್ಲಿ ವಿಜೇತರಿಗೆ ಪ್ರಶಸ್ತಿ ಪತ್ರ, ಬಹುಮಾನ ವಿತರಿಸಲಾಯಿತು.



## ಬೀದರ್

* ಸೆಪ್ಟೆಂಬರ್ 19 ರಂದು ಬೀದರ್ ವಿಶ್ವವಿದ್ಯಾಲಯದಲ್ಲಿ ಪದವಿ ಕಾಲೇಜಿನ ರೋವರ್ಸ್ ಲೀಡರ್ ಮತ್ತು ರೇಂಜರ್ಸ್ ಲೀಡರ್‌ಗಳಿಗೆ ಮಾಹಿತಿ ಶಿಬಿರವನ್ನು ನಡೆಸಲಾಯಿತು ವಿಶ್ವವಿದ್ಯಾಲಯುದ ಕುಲಸಚಿವರು (ಮೌಲ್ಯ ಮಾಪನ) ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಹಾಗೂ ಕುಲಸಚಿವರು (ಆಡಳಿತ) ಶ್ರೀಮತಿ ಸುರೇಖಾ, ಕೆ.ಎ.ಎಸ್.ರವರು ಸರಸ್ವತಿ ದೇವಿ ಪೂಜೆಯೊಂದಿಗೆ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಲ್ಯಾಣ ಕರ್ನಾಟಕದ ನೋಡಲ್ ಅಧಿಕಾರಿಗಳು ಹಾಗೂ ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಡಾ॥ ಭರಶೆಟ್ಟಿ, ವಿಶ್ವವಿದ್ಯಾಲಯದ ನೋಡಲ್ ಅಧಿಕಾರಿಗಳು ಶ್ರೀ ಅರುಣ್ ಕುಮಾರ್ ಬೇಂದ್ರೆ, ಜಿಲ್ಲಾ ನೋಡಲ್ ಅಧಿಕಾರಿಗಳು, ರೋವರ್ಸ್ ನೋಡಲ್ ಅಧಿಕಾರಿ ಡಾ॥ ರಾಜಕುಮಾರ್ ಆಲ್ಲೂರೆ. ರೇಂಜರ್ಸ್ ನೋಡಲ್ ಅಧಿಕಾರಿ ಊರ್ವಶಿ ಉಪಸ್ಥಿತರಿದ್ದರು.



## ಚಾಮರಾಜನಗರ

* ಅಕ್ಟೋಬರ್ 18 ರಿಂದ 23ರ ವರೆಗೆ ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ ದೀಪಾವಳಿ ಜಾತ್ರಾ ಮಹೋತ್ಸವದ ಅಂಗವಾಗಿ ಜಿಲ್ಲಾಮಟ್ಟದ ಸೇವಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಚಾಮರಾಜನಗರ ಜಿಲ್ಲೆಯ ವಿವಿಧ ಕಾಲೇಜುಗಳಿಂದ 113 ರೋವರ್ಸ್ ಮತ್ತು ರೇಂಜರ್ಸ್‌ಗಳು ಆಗಮಿಸಿದ್ದರು ಶ್ರೀ ಮಲೆಮಹದೇಶ್ವರ ಬೆಟ್ಟದಲ್ಲಿ 6 ಗಂಟೆಯಿಂದ ರಾತ್ರಿ 10 ಗಂಟೆಯ ವರೆಗೆ ಸೇವೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಆಗಮಿಸಿ ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವೆಯನ್ನು ಶ್ಲಾಘಿಸಿದರು. ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಸನ್ಮಾನ್ಯ ಶ್ರೀ ರಘುರವರು ರೋವರ್ಸ್ ಮತ್ತು ರೇಂಜರ್ಸ್‌ಗಳ ಸೇವೆಯನ್ನು ಶ್ಲಾಗಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಉಸ್ತುವಾರಿಯಾದ ಶ್ರೀ ಮಹಾದೇವ್, ಶ್ರೀ ವಿ.ಎಂ. ರಾಮಚಂದ್ರ, ಜಿಲ್ಲಾ ಕಾರ್ಯದರ್ಶಿಗಳು, ದೇವಸ್ಥಾನದ ಸಿಬ್ಬಂದಿ ವರ್ಗದವರು ಮತ್ತು ಶ್ರೀ ಅಶೋಕ್ ಕುಮಾರ್ ಕೆ.ಪಿ., ಜಿಲ್ಲಾ ಸಂಘಟಕರು ಈ ಸೇವಾ ಶಿಬಿರದ ಮೇಲುಸ್ತುವಾರಿ ವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



## ಚಿತ್ರದುರ್ಗ

* ಸೆಪ್ಟೆಂಬರ್ 20 ರಂದು ಪ್ರಾವೀಣ್ಯತಾ ಪದಕ ಶಿಬಿರವನ್ನು ಎಸ್.ಆರ್.ಎಸ್. ಹೆರಿಟಿಜಲ್ ಸ್ಕೂಲ್, ಚಿತ್ರದುರ್ಗ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರದಲ್ಲಿ ಜಿಲ್ಲಾ ಸಂಸ್ಥೆಯ ಸಂಘಟಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಮುಂತಾದವರು ಭಾಗವಹಿಸಿದ್ದರು. ಈ ಶಿಬಿರದಲ್ಲಿ ಸ್ಕೌಟ್ಸ್–ಗೈಡ್ಸ್‌ಗಳಿಗೆ ಐದು ಪ್ರಾವೀಣ್ಯತಾ ಪದಕವನ್ನು ಬೋಧಿಸಲಾಯಿತು.



* ಸೆಪ್ಟೆಂಬರ್ 23 ರಂದು ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ ಕಾಲೇಜಿನಲ್ಲಿ ಪರಿಸರ ಸಂರಕ್ಷಣೆ ಮತ್ತು ನಶೆ ಮುಕ್ತ ಸಮಾಜದ ಬಗ್ಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಪ್ರೊ. ಜೆ. ಕರಿಯಪ್ಪ ಮೌಳಿಗೆರವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಯಾಗಿ ಬಡಾವಣೆ ಪೋಲಿಸ್ ಉಪಠಾಣೆ ಪಿ.ಎಸ್.ಐ. ಶ್ರೀಮತಿ ಯಶೋದಮ್ಮ, ಜಿಲ್ಲಾ ಯುವ ಸಮಿತಿಯ ಅಧ್ಯಕ್ಷರಾದ ಶ್ರೀ ಸಂತೋಷ .ಎಸ್ ಭಾಗವಹಿಸಿದ್ದರು. ನಂತರ ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆಯನ್ನು ಮಾಡಲಾಯಿತು. ನಂತರ ಮುಖ್ಯ ಅತಿಥಿಯವರು ಪ್ರತಿಜ್ಞಾವಿಧಿಯನ್ನು ಬೋಧಿಸಿದರು.



* ಸೆಪ್ಟೆಂಬರ್ 25 ರಿಂದ ಅಕ್ಟೋಬರ್ 03ರ ವರೆಗೆ ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗದಲ್ಲಿ ಶರಣ ಸಂಸ್ಕೃತಿ ಉತ್ಸವದಲ್ಲಿ ಜಿಲ್ಲೆಯ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ, ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ ಮತ್ತು ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜು ಹಿರಿಯೂರು ಕಾಲೇಜುಗಳಿಂದ ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆ ಸಲ್ಲಿಸಿದರು.



* ಸೆಪ್ಟೆಂಬರ್ 25 ರಂದು ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜು ಹಿರಿಯೂರು ಇಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಕಾರ್ಯಾಗಾರ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಮಹೇಶ್ ರೋವರ್ ಸ್ಕೌಟ್



ಲೀಡರ್, ಡಾ. ಗಂಗಾಧರ ಆರ್. ಜಿಲ್ಲಾ ಯುವ ಸಮಿತಿಯ ಉಧ್ಯಕ್ಷರಾದ ಶ್ರೀ ಸಂತೋಷ ಎಸ್. ಉಪಸ್ಥಿತರಿದ್ದರು.

* ಅಕ್ಟೋಬರ್ 02 ರಂದು ಜಿಲ್ಲಾ ಕಾರ್ಯಾಲಯದಲ್ಲಿ ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಎಸ್. ಉಜ್ಜಿನಪ್ಪನವರು ವಹಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಸವಿತಾ ಶಿವಕುಮಾರ್ ಉಪಾಧ್ಯಕ್ಷರಾದ ಶ್ರೀ ಎಸ್. ಪರಮೇಶ್ವರಪ್ಪ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಅಕ್ಟೋಬರ್ 07 ರಂದು ಜಿಲ್ಲಾ ಕಾರ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಎಸ್. ಉಜ್ಜಿನಪ್ಪನವರು ವಹಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ಪರಮೇಶ್ವರಪ್ಪ ಹಾಗೂ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಕರ್ನಾಟಕದ ಘನವೆತ್ತ ರಾಜ್ಯಪಾಲರಿಂದ ಪ್ರಶಸ್ತಿ ಪಡೆದ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಎಂ.ಆರ್. ಮಂಜನಾಥ್, ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಎ. ಲಿಂಗಾರೆಡ್ಡಿ, ಲೀಡರ್ ಟ್ರೈನರ್ ಶ್ರೀ ಮಹೇಶ್ ಸಿ.ಎನ್. ಶ್ರೀ ಗುರುಮೂರ್ತಿ ಬಿ.ಯವರನ್ನು ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.



## ದಕ್ಷಿಣ ಕನ್ನಡ

* ಸ್ಥಳೀಯ ಸಂಸ್ಥೆ ಗುರುಪುರ ಇದರ ವತಿಯಿಂದ ದೇಶಭಕ್ತಿ ಗೀತಗಾಯನ ಸ್ಪರ್ಧೆಯು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳ ಇಲ್ಲಿ ಸೆಪ್ಟೆಂಬರ್ 06 ರಂದು ನಡೆಯಿತು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ರೋಹನ್ ಅತಿಕಾರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ಸ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಜಯಲಕ್ಷ್ಮೀ ಶೆಟ್ಟಿ ಸ್ವಾಗತಿಸಿ, ಸಹಕಾರ್ಯದರ್ಶಿ, ಶ್ರೀಮತಿ ಪೂರ್ಣಿಮ ವಂದಿಸಿದರು.



* ಅಕ್ಟೋಬರ್ 11 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು ಇಲ್ಲಿ ಪ್ರಾಂಶುಪಾಲರಾದ ಶ್ರೀ ಜಯಕರ್ ಭಂಡಾರಿರವರ ಅಧ್ಯಕ್ಷತೆಯಲ್ಲಿ ರೋವರ್–ರೇಂಜರ್ ದಳಗಳ ಉದ್ಘಾಟನಾ ಸಮಾರಂಭ ನಡೆಯಿತು. ರೋವರ್ ಸ್ಕೌಟ್ ಲೀಡರ್ ಶ್ರೀ ಮೊಹಮ್ಮದ್ ಇಕ್ಬಾಲ್, ರೇಂಜರ್ ಲೀಡರ್ ಡಾ. ಅಪರ್ಣ ಆಳ್ವ ಹಾಗೂ ಶ್ರೀ ದೇವಿಪ್ರಸಾದ್, ಡಾ. ಜ್ಯೋತಿ ಪ್ರಿಯ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ದೀಪ ಬೆಳಗಿಸಿ ರೋವರ್ಸ್–ರೇಂಜರ್ಸ್‌ಗಳಿಗೆ ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿದರು. ರೇಂಜರ್ ದೈವಿಕ ಸ್ವಾಗತಿಸಿದರು. ರೇಂಜರ್ ಕಾವ್ಯ ವಂದಿಸಿದರು. ರೇಂಜರ್ ಅಕ್ಷರ ಕಾರ್ಯಕ್ರಮ ನಿರ್ವಹಿಸಿದರು.



## ದಾವಣಗೆರೆ

* ಸೆಪ್ಟೆಂಬರ್ 13 ರಂದು ಸಿದ್ದಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕು ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು ನೆರವೇರಿಸಿದರು. ಶ್ರೀಮತಿ ಗಾಯಿತ್ರಿ ಚಿಮ್ಮದ್, ಸ್ಥಳೀಯ ಸಂಸ್ಥೆ ಖಜಾಂಚಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳಿಗೆ ಶುಭ ಕೋರಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಮಹೇಶ್ ಎಂ.ಸಿ. ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ನಡೆಸಿಕೊಟ್ಟರು.



* ಸೆಪ್ಟೆಂಬರ್ 16 ರಂದು ಜಿಲ್ಲಾ ಪಂಚಾಯತ್‌ನಿಂದ ಬಂದಿರುವ ಅನುದಾನದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಸ್.ಪಿ.ಎಸ್. ನಗರ ಗೈಡ್ಸ್‌ಗಳಿಗೆ ಹಾಗೂ ಉಕ್ಕಡಗಾತ್ರಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸ್ಕೌಟ್ಸ್‌ಗಳಿಗೆ ಸಮವಸ್ತ್ರವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀಮತಿ ಭಾಗ್ಯ ಮತ್ತು ಶ್ರೀಮತಿ ಗದಿಗೆವ್ವ ಹೆಚ್.ಡಬ್ಲ್ಯೂ.ಬಿ. ಗೈಡ್ ಕ್ಯಾಪ್ಟನ್ ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ ಎಂ. ಜಿಲ್ಲಾ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.



* ಸೆಪ್ಟೆಂಬರ್ 17 ರಂದು ಹರಿಹರ ಸ್ಥಳೀಯ ಸಂಸ್ಥೆ ಅಡಿಯಲ್ಲಿ ಬರುವ ಎಜು ಏಷಿಯಾ ನರ್ಸರಿ ಶಾಲೆಯಲ್ಲಿ ನೂತನ ಬನ್ನೀಸ್ ಘಟಕವನ್ನು ದೀಪವನ್ನು ಬೆಳಗಿಸಿ ವಿದ್ಯಾರ್ಥಿಗಳಿಗೆ ಬನ್ನೀ ಕಿರೀಟವನ್ನು ಹಾಕುವ ಮೂಲಕ ಪ್ರಾರಂಭಿಸಲಾಯಿತು. ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಬನ್ನೀಸ್‌ಗಳಿಗೆ ಶಿಕ್ಷಕಿಯರ ಪಾತ್ರ ಬಹಳ ಮಹತ್ವವನ್ನು ಎಂಬುದನ್ನು ವಿವರಿಸಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ವಿದ್ಯಾರ್ಥಿಗಳಿಗೆ ರೈಮ್ಸ್ ಅನ್ನು ಹೇಳಿಕೊಡುವ ಮೂಲಕ ಶಿಕ್ಷಕಿಯರಿಗೆ ಮಕ್ಕಳಿಂದ ಧನ್ಯವಾದವನ್ನು ಹೇಳಿಸಿದರು. ಶ್ರೀಮತಿ ಸಹನ, ಆಡಳಿತಾಧಿಕಾರಿಗಳು, ಶ್ರೀಮತಿ ಸುನಿತಾ ಮುಖ್ಯೋಪಾಧ್ಯಾಯರು, ಬನ್ನಿ ಶಿಕ್ಷಕಿಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 20 ರಂದು ಗುಡ್‌ವಿಲ್ ಶಾಲೆಯ ಶಿಕ್ಷಕಿಯರಿಗೆ ಪ್ರಾರಂಭಿಕ ಶಿಬಿರವನ್ನು ಜಿಲ್ಲಾ ಸಂಸ್ಥೆ ವತಿಯಿಂದ ಆಯೋಜಿಸಲಾಯಿತು. ಶಿಬಿರದ ನಾಯಕರಾಗಿ ಶ್ರೀಮತಿ ರತ್ನ ಎಂ., ಎಲ್.ಟಿ.(ಗೈ) ಜಿಲ್ಲಾ ಕಾರ್ಯದರ್ಶಿಗಳು ಸ್ಕೌಟ್–ಗೈಡ್ ಬಗ್ಗೆ ಮಾಹಿತಿಯನ್ನು ನೀಡಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ.ರವರು ದಳ ನಡೆಸುವುದರ ಬಗ್ಗೆ ಮಾಹಿತಿಯನ್ನು ನೀಡಿದರು. ಶಿಬಿರವನ್ನು ಗುಡ್‌ವಿಲ್ ಶಾಲೆಯ ಆಡಳಿತಾಧಿಕಾರಿಗಳಾದ ಶ್ರೀ ಖಾದಿರ್ ಬಾಷಾರವರ ಸಹಾಯದಿಂದ ಸಂಘಟಿಸಿದರು. ಒಟ್ಟು 13 ಶಿಕ್ಷಕಿಯರು ಭಾಗವಹಿಸಿದರು.



* ಸೆಪ್ಟೆಂಬರ್ 25 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊನ್ನಾಳಿಯಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಪ್ರಾಂಶುಪಾಲರಾದ ಶ್ರೀ ಧನಂಜಯರವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ರೋವರ್ಸ್ ಮತ್ತು ರೇಂಜರ್ಸ್‌ಗಳು ಸದಾ ಚಟುವಟಿಕೆಯಿಂದ ಇರಬೇಕೆಂದು ತಿಳಿಸಿದರು. ಜಿಲ್ಲಾ ಸಂಸ್ಥೆಯ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.

* ಸೆಪ್ಟೆಂಬರ್ 27 ರಿಂದ 29ರ ವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಜಿಲ್ಲಾ ಪುರಸ್ಕಾರ, ರಾಜ್ಯ ಪುರಸ್ಕಾರ ತರಬೇತಿ ಮತ್ತು ಚಾರಣ ಶಿಬಿರವನ್ನು ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಅತಿಥಿ ಬೋಧಕರಾಗಿ ಶ್ರೀ ಪ್ರತಿಮ್‌ಕುಮಾರ್ ಎಲ್.ಟಿ.(ಸ್ಕೌ) ದಕ್ಷಿಣ ಕನ್ನಡ ಜಿಲ್ಲೆ ಇವರು ಭಾಗವಹಿಸಿ ಮಕ್ಕಳಿಗೆ ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರದ ಬಗ್ಗೆ ವಿಶೇಷ ಮಾಹಿತಿ ನೀಡಿದರು. ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆ, ಬಾಪೂಜಿ ಶಾಲೆ, ಪಿ.ಎಸ್.ಎಸ್.ಇ.ಎಂ.ಆರ್. ಆನ್‌ಮೋಲ್ ಪಬ್ಲಿಕ್ ಶಾಲೆ, ಮಾಗನೂರು ಬಸಪ್ಪ ಶಾಲೆಯ 180 ಸ್ಕೌಟ್ಸ್–ಗೈಡ್ಸ್‌ಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಶ್ರೀ ರವೀಂದ್ರಸ್ವಾಮಿ ಟಿ.ಎಂ. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರದ ನೇತೃತ್ವ ವಹಿಸಿದ್ದರು. ಸ್ಕೌಟರ್ಸ್–ಗೈಡರ್ಸ್‌ಗಳು ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸಿದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭಾಗವಹಿಸಿದ್ದರು.



* ಸೆಪ್ಟೆಂಬರ್ 30 ರಂದು ಧ.ರಾ.ಮ. ಸ್ಕೌಟ್ ಭವನದಲ್ಲಿ ದಸರಾ ಹಬ್ಬದ ಪ್ರಯುಕ್ತ ಶ್ರೀ ಮರುಳಾರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಆಯುಧ ಪೂಜೆಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಪುಟ್ಟಪ್ಪ ಕಾಶೀಪುರ್ ಜಿಲ್ಲಾ ಕಬ್ ಆಯುಕ್ತರು, ಶ್ರೀಮತಿ ಆರ್. ಸುಖವಾಣಿ ಜಿಲ್ಲಾ ಸಹ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.



* ಅಕ್ಟೋಬರ್ 02 ರಂದು ಧ.ರಾ.ಮ. ಸ್ಕೌಟ್ ಭವನದಲ್ಲಿ ಮಹಾತ್ಮ ಗಾಂಧೀ ಜಯಂತಿ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜಯಂತಿಯನ್ನು ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸರಳವಾಗಿ ಆಚರಿಸಲಾಯಿತು.

* ಅಕ್ಟೋಬರ್ 02 ರಂದು ಶ್ರೀ ಸಿದ್ಧಗಂಗಾ ಸ್ಥಳೀಯ ಸಂಸ್ಥೆ ವತಿಯಿಂದ ಮಹಾತ್ಮ ಗಾಂಧೀಜಿಯವರ ಮತ್ತು ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜನ್ಮ ದಿನಾಚರಣೆಯನ್ನು ದಾವಣಗೆರೆ ಜಿಲ್ಲಾಡಳಿತದ ನೇತೃತ್ವದಲ್ಲಿ ಧಾರ್ಮಿಕ ಪಠಣ ಕಾರ್ಯಕ್ರಮದೊಂದಿಗೆ ಆಚರಿಸಲಾಯಿತು.

* ಅಕ್ಟೋಬರ್ 05 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ರಾಜ್ಯ ಪುರಸ್ಕಾರ ಮತ್ತು ರಾಷ್ಟ್ರಪತಿ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವ ಮಕ್ಕಳಿಗೆ ವಿಪತ್ತು ನಿರ್ವಹಣಾ ತರಬೇತಿ ಶಿಬಿರವನ್ನು ಶ್ರೀ ತರಳಬಾಳು ಜಗದ್ಗುರು ವಸತಿಯುತ



ಶಾಲೆಯಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಪ್ರಕೃತಿ ವಿಪತ್ತು ಸಮಯದಲ್ಲಿ ಸ್ವಯಂ ರಕ್ಷಣಾ ಕ್ರಮಗಳು, ತುರ್ತು ಪ್ರಥಮ ಚಿಕಿತ್ಸೆ ನೀಡುವ ವಿಧಾನಗಳು ಮತ್ತು ಮೂಲಭೂತ ರಕ್ಷಣಾ ತಂತ್ರಗಳು ಕುರಿತು ಪ್ರಾಯೋಗಿಕ ಪ್ರದರ್ಶನದ ಮೂಲಕ ಮಕ್ಕಳಿಗೆ ತಿಳುವಳಿಕೆ ನೀಡಲಾಯಿತು. ಎಸ್.ಡಿ.ಆರ್.ಎಫ್. ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಕಿರಣ್ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಶ್ರೀ ಇಮ್ರಾನ್ ಮತ್ತು ಇವರ ಸಿಬ್ಬಂದಿ ವರ್ಗದವರು ತಾಂತ್ರಿಕವಾಗಿ ಪ್ರಾತ್ಯಕ್ಷಿಯನ್ನು ನೀಡಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಶ್ರೀ ಎನ್.ಕೆ. ಕೊಟ್ರೇಶ್, ಜಿಲ್ಲಾ ಸಹಾಯಕ ಆಯುಕ್ತರು, ಸ್ಕೌಟ್ ಮಾಸ್ಟರ್‌ಗಳಾದ ಶ್ರೀ ಶಶಿಕುಮಾರ್, ಶ್ರೀ ವಿಜಯ್ ಕುಮಾರ್, ಗೈಡ್ ಕ್ಯಾಪ್ಟನ್ ಶ್ರೀಮತಿ ಅನಿತಾ, ಶ್ರೀಮತಿ ಸುಜಾತ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಅಕ್ಟೋಬರ್ 12 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಕುಂದವಾಡ ಕೆರೆಯ ತೀರದಲ್ಲಿ ಸಮುದಾಯ ಸೇವಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆ, ಬಾಪೂಜಿ ಶಾಲೆ, ಮಾಗನೂರು ಬಸಪ್ಪ ಶಾಲೆ, ಅನ್‌ಮೋಲ್ ಪಬ್ಲಿಕ್ ಶಾಲೆಯ ಸ್ಕೌಟ್–ಗೈಡ್‌ಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ದಿನೇಶ್ ಕೆ. ಶೆಟ್ಟಿ ಭಾಗವಹಿಸಿ ಮಕ್ಕಳಿಗೆ ಸಮುದಾಯ ಸೇವೆಯ ಮಹತ್ವವನ್ನು ತಿಳಿಸಿದರು. ಮಕ್ಕಳು ಕೆರೆಯ ತೀರದಲ್ಲಿ ಇರುವ ಮರಗಳಿಗೆ ಸುಣ್ಣ ಹಚ್ಚಿ, ಕಸ ಕಡ್ಡಿಗಳನ್ನು ಗುಡಿಸಿ ನೆರೆದಿದ್ದ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ. ಸ್ಕೌಟ್ ಮಾಸ್ಟರ್ ಹನುಮಂತಪ್ಪ, ಗೈಡ್ ಕ್ಯಾಪ್ಟನ್ ಶ್ರೀಮತಿ ರಜಿನಿ ಹೆಚ್.ಎಂ., ಶ್ರೀಮತಿ ಅನಿತಾ ಮುಂತಾದವರು ಉಪಸ್ಥಿತರಿದ್ದರು. ಉದ್ಯಮಿ ಶ್ರೀ ಗಿರೀಶ್ ಮಾಗನಹಳ್ಳಿಯವರು ಮಕ್ಕಳಿಗೆ ವ್ಯವಸ್ಥೆ ಮಾಡಿದರು.

## ಧಾರವಾಡ

* ಸೆಪ್ಟೆಂಬರ್ 12 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ಪದವಿಪೂರ್ವ ಉಪನ್ಯಾಸಕ/ ಉಪನ್ಯಾಸಕಿಯರುಗಳಿಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಸದರಿ ಶಿಬಿರದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಶ್ರೀಶೈಲ ಚ. ಕರೀಕಟ್ಟಿಯವರು ವಹಿಸಿಕೊಂಡಿದ್ದರು. ಅತಿಥಿಗಳಾಗಿ ಶ್ರೀ ಸಯ್ಯದಫಯಾಜ ಅಹಮ್ಮದ, ಪ್ರಾಂಶುಪಾಲರು ಸ.ಪ.ಪೂ. ಕಾಲೇಜ್, ಮೊರಬ ತಾಲ್ಲೂಕು ನವಲಗುಂದ, ಜಿಲ್ಲಾ ರೋವರ್ಸ್ ಆಯುಕ್ತರಾದ, ಶ್ರೀ ಡಿ.ಡಿ. ಮಾಳಗಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಎಸ್.ಐ. ನೇಕಾರ, ಶ್ರೀ ಎಸ್.ವಿ. ಮೊರಬ ಇವರು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ಎನ್. ಸಾವಳಗಿ, ಜಂಟಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಜೆ.ಆರ್. ಜವಳಿ ಇತರ ಪದಾಧಿಕಾರಿಗಳು ಹಾಗೂ ಶಿಬಿರಾರ್ಥಿಗಳು ಸೇರಿ ಒಟ್ಟು 51 ಜನ ಭಾಗವಹಿಸಿದ್ದರು.



## ಕೊಡಗು

* * ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಅಕ್ಟೋಬರ್ 17 ರಂದು ಅಪರಾಹ್ನ 01 ಗಂಟೆ 44 ನಿಮಿಷಕ್ಕೆ ಸರಿಯಾಗಿ ಶ್ರೀ ಕಾವೇರಿ ಮಾತೆಯು ತೀರ್ಥೋದ್ಭವವಾಯಿತು. ಈ ಸಂದರ್ಭ ಕೊಡಗು ಮೈಸೂರು ಲೋಕಸಭಾ ಸಂಸದರಾದ ಶ್ರೀ ಯದುವೀರ್ ಒಡೆಯರ್, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ. ಮಂತರ್ ಗೌಡ, ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ, ಶ್ರೀ ಪೊನ್ನಣ್ಣ, ಜಿಲ್ಲಾಧಿಕಾರಿ ಶ್ರೀ ವೆಂಕಟರಾಜು, ಅಪಾರ ಜಿಲ್ಲಾಧಿಕಾರಿ ಶ್ರೀಮತಿ ಐಶ್ವರ್ಯ, ಪೊಲೀಸ ವರಿಷ್ಠಾಧಿಕಾರಿ ಶ್ರೀ ರಾಮರಾಜನ್‌ರವರು ಉಪಸ್ಥಿತರಿದ್ದರು. ಕಾವೇರಿ ಪದವಿಪೂರ್ವ ಕಾಲೇಜಿನ 20 ರೋವರ್‌ಗಳು ಶ್ರೀಮತಿ ಮೈಥಿಲಿರಾವ್, ಎಲ್ಲ ಭಕ್ತರಿಗೂ ತೀರ್ಥ ವಿತರಿಸುವ ಸೇವೆ ಮಾಡಿದರು.



* ಅಕ್ಟೋಬರ್ 15 ರಂದು ಹೋಟೆಲ್ ಅಸೋಸಿಯೇಷನ್, ವಿವಿಧ ಸಂಘ–ಸಂಸ್ಥೆಗಳು ಹಾಗೂ ಶಾಸಕರು ಕರೆ ನೀಡಿದ "ಸ್ವಚ್ಛ ಕೊಡಗು ಸುಂದರ ಕೊಡಗು" ಕಾರ್ಯಕ್ರಮದಲ್ಲಿ ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದರು.



* ಅಕ್ಟೋಬರ್ 16 ರಂದು ಕೊಡಗು ಯನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜ್ ಪಾಲಿಟೆಕ್ನಿಕ್ ಕಾಲೇಜ್ ಕುಶಾಲನಗರ ಇಲ್ಲಿಗೆ ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನಾ ಪ್ರಾದೇಶಿಕ ಪರಿಸರ ಇಲಾಖೆ ಯೋನಾ ಸಹಾಯಕರಾದ ಆಸ್ಟಿನ್ ಅವರೊಂದಿಗೆ ತೆರಳಿ ಸ್ಕೌಟ್–ಗೈಡ್ಸ್ ದಳ ತೆರೆಯುವಂತೆ ಪತ್ರ ನೀಡಲಾಯಿತು.



## ಕೋಲಾರ

* ಸೆಪ್ಟೆಂಬರ್ 05 ರಂದು ಶಿಕ್ಷಕ ದಿನಾಚರಣೆಯ ಅಂಗವಾಗಿ 110 ಗಿಡಗಳನ್ನು ಕೋಲಾರ ನಗರದಲ್ಲಿ ನೆಡಲಾಯಿತು. ಈ ಸೇವಾ ಕಾರ್ಯಕ್ಕೆ ಡಾ॥ ಶಂಕರ್ ನಾಯಕ್‌ರವರು ಚಾಲನೆ ನೀಡಿದರು.



* ಸೆಪ್ಟೆಂಬರ್ 07 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಸ್ವಚ್ಛತಾ ಹಾಗೂ ಗಿಡಗಳನ್ನು ನೆಡುವ ಸೇವಾಕಾರ್ಯಕ್ರಮದಲ್ಲಿ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿ ಸೇವೆ ಸಲ್ಲಿಸಿದರು.



* ಸೆಪ್ಟೆಂಬರ್ 15 ರಂದು ಜಿಲ್ಲಾ ಆಡಳಿತದ ವತಿಯಿಂದ ಆಯೋಜನೆ ಮಾಡಿದ್ದ ಅಂತರ್ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ ಕಾರ್ಯದಲ್ಲಿ ಜಿಲ್ಲೆಯ 250 ವಿದ್ಯಾರ್ಥಿಗಳು ಮತ್ತು ಪದಾಧಿಕಾರಿಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 25 ರಂದು ಗಾಂಧೀ ಜಯಂತಿ ಅಂಗವಾಗಿ ಕೋಲಾರ ನಗರದಲ್ಲಿ ಸ್ವಚ್ಛತೆ ಹಾಗೂ ಹಸಿರೀಕರಣಕ್ಕಾಗಿ ಮಹಿಳಾ ಸಮಾಜ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳಿಂದ ಜಾಗೃತಿ ಜಾಥಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು.



* ಅಕ್ಟೋಬರ್ 02 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಗಾಂಧಿ ಜಯಂತಿ, ಲಾಲ್ ಬಹುದ್ದೂರ್ ಶಾಸ್ತ್ರಿಯವರ ಜನ್ಮ ದಿನಾಚರಣೆಯನ್ನು ಹಾಗೂ ಆಯುಧ ಪೂಜೆಯನ್ನು ಮಾಡಲಾಯಿತು.



## ಕೊಪ್ಪಳ

* ಅಕ್ಟೋಬರ್ 15 ರಂದು ಕೊಪ್ಪಳ ಜಿಲ್ಲೆಯ ಪದವಿಪೂರ್ವ ಕಾಲೇಜಿನ ಉಪನ್ಯಾಸಕರ ಒಂದು ದಿನದ ಪ್ರಾರಂಭಿಕ ಶಿಬಿರವನ್ನು, ರಾಜ್ಯ ಸರ್ಕಾರಿ ನೌಕರರ ಸಾಂಸ್ಕೃತಿಕ ಭವನ ಕಿನ್ನಾಳ ರಸ್ತೆ ಕೊಪ್ಪಳ ಇಲ್ಲಿ ಜರುಗಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಹೆಚ್.ಎಂ. ಸಿದ್ರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಉಪನ್ಯಾಸಕರಾಗಿ ಡಾ. ಹೆಚ್.ಬಿ. ಭರಶಟ್ಟಿ, ಎಲ್.ಟಿ.(ಎಸ್), ಜಿಲ್ಲಾ ಆಯುಕ್ತರು (ಸ್ಕೌ) ಬೀದರ್ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಉದ್ಘಾಟಕರಾಗಿ ಶ್ರೀ ಅನೀಲ್ ಕುಮಾರ್ ನಿಕಟಪೂರ್ವ ಅಧ್ಯಕ್ಷರು, ಜಿಲ್ಲಾ ಪ್ರಾಚಾರ್ಯರ ಸಂಘ, ಕೊಪ್ಪಳ ಮುಖ್ಯ ಅತಿಥಿಗಳಾಗಿ ಶ್ರೀ ಬಸಪ್ಪ ನಾಗೂಲಿ, ಜಿಲ್ಲಾ ಅಧ್ಯಕ್ಷ, ಪ್ರಾಚಾರ್ಯರ ಸಂಘ ಕೊಪ್ಪಳ ಶ್ರೀ ಸೋಮಶೇಖರ, ಜಿಲ್ಲಾಧ್ಯಕ್ಷರು, ಉಪನ್ಯಾಸಕರ ಸಂಘ, ಶ್ರೀ ಮಲ್ಲಿಕಾರ್ಜುನ ಚೌಕಿಮಠ ಡಿ.ಸಿ.(ಎಸ್), ಶ್ರೀಮತಿ ಅರುಣಾವಸ್ತ್ರದ ಡಿ.ಸಿ. (ಗೈ), ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಸ್ವಾಗತಿಸಿದರು ಮತ್ತು ಕಾರ್ಯಕ್ರಮ ಕುರಿತು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ನಂತರ, ಶ್ರೀ ಅನೀಲ್‌ಕುಮಾರ್ ಜಿ. ನಿಕಟಪೂರ್ವ ಪ್ರಾಚಾರ್ಯರು, ಸಂಘದ ಅಧ್ಯಕ್ಷ ಸಸಿಗೆ ನೀರು ಹಾಕುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಹೆಚ್.ಎಂ. ಸಿದ್ರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಅವರು ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳು ಸೇವಾ ಕಾರ್ಯಕ್ರಮಗಳು ಸಮುದಾಯ ಸೇವೆ, ರಾಜ್ಯ ರಾಷ್ಟ್ರೀಯ ಕಾರ್ಯಕ್ರಮಗಳ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಒಟ್ಟು 22 ಉಪನ್ಯಾಸಕರು ಹಾಜರಿದ್ದರು. ಶ್ರೀ ಶರೀಫ್ ಹತ್ತಿಮತ್ತೂರ್ ಎ.ಎಸ್.ಓ.ಸಿ.ರವರು ನಿರೂಪಣೆ ಮಾಡಿದರು, ಕೊನೆಯಲ್ಲಿ ಶ್ರೀ ಪ್ರಭಾಕರ ದಾಸರವರು ವಂದನಾರ್ಪಣೆ ಮಾಡಿದರು. ಕುವೆಂಪು ಶತಮಾನೋತ್ಸವ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಕಿನ್ನಾಳ ತಾ. ಕೊಪ್ಪಳ ವಿಶ್ವ ಸ್ಕಾರ್ಫ್ ದಿನಾಚರಣೆ ಅಂಗವಾಗಿ ಶಾಲೆಯ ಸ್ಕೌಟ್ಸ್‌ಗಳು ತಮ್ಮ ಸ್ಕಾರ್ಫ್ ಧರಿಸಿ ಚಟುವಟಿಕೆಗಳನ್ನು ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು, ಶಾಲೆಯ ಮುಖ್ಯ ಗುರುಗಳು ಶ್ರೀ ಪ್ರಭಾಕರದಾಸರ, ಜಿಲ್ಲಾ ಸಹ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಸ್ಕಾರ್ಫ್‌ಡೇ ಕುರಿತು ಶ್ರೀ ಮಾರುತಿ ಅರೇರ್‌ರವರು ವಿವರಣೆ ನೀಡಿದರು.



## ಮಧುಗಿರಿ

* ಸೆಪ್ಟೆಂಬರ್ 27 ರಂದು ಮಧುಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್.ಎಸ್.ಎಸ್., ರೆಡ್‌ಕ್ರಾಸ್, ರೋವರ್, ರೇಂಜರ್, ಘಟಕಗಳು ಹಾಗೂ ಜಿಲ್ಲಾ ತಾಲೂಕು ಆರೋಗ್ಯ ಇಲಾಖೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿದ್ದು ಈ ಶಿಬಿರದ ಉದ್ಘಾಟನೆಯನ್ನು ಶ್ರೀ ಲಾಲಪೇಟ್ ಮಂಜುನಾಥ್, ಪಟ್ಟಣ ಪಂಚಾಯತ್ ಅಧ್ಯಕ್ಷರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಜಿ.ಎಂ. ಚಂದ್ರಶೇಖರ್, ತಾಲ್ಲೂಕು ಆರೋಗ್ಯ ಅಧಿಕಾರಿ, ಡಾ. ರಾಮೇಗೌಡರವರು, ಆಡಳಿತ ಅಧಿಕಾರಿಗಳು ಡಾ. ಮೋಹನ್ ಹಾಗೂ ಡಾ. ಆನಂದ್ ಡಿ. ಮತ್ತು ಅಧ್ಯಕ್ಷತೆಯನ್ನು ಡಾ. ಜೆ.ಎಸ್. ಕುಮಾರ್, ಪ್ರಾಂಶುಪಾಲರು ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಕಾಲೇಜು ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಲು ರೋವರ್ ಲೀಡರ್ ಶ್ರೀ ದರ್ಶನ್‌ರವರು ರೇಂಜರ್ ಘಟಕ ಲೀಡರ್ ಶ್ರೀಮತಿ ವೇದಲಕ್ಷ್ಮೀ, ಶ್ರೀ ಕರಿಸಿದ್ದಪ್ಪ ಎ.ಎಸ್.ಓ.ಸಿ. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ನಂತರ ರೋವರ್-ರೇಂಜರ್‌ಗಳು ಸೇವೆ ಸಲ್ಲಿಸಿದರು ಸುಮಾರು 950 ವಿದ್ಯಾರ್ಥಿಗಳು ಆರೋಗ್ಯ ತಪಾಸಣೆಯಲ್ಲಿ ಪಾಲ್ಗೊಂಡಿದ್ದರು.

* ಸೆಪ್ಟೆಂಬರ್ 11 ರಂದು ಶಿರಾ ಸ್ಥಳೀಯ ಸಂಸ್ಥೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸ ದಳಗಳ ರಚನೆಗೆ ಕಾಲೇಜ್ ಪ್ರಾಂಶುಪಾಲರು ಹಾಗೂ ರೋವರ್ ಲೀಡರ್ ಶ್ರೀ ತಿಪ್ಪೇಸ್ವಾಮಿ, ರೇಂಜರ್ ಲೀಡರ್ ಶ್ರೀಮತಿ ವನಿತಾ ಇವರ ನೇತೃತ್ವದಲ್ಲಿ ಯೂಥ್ ಕಮಿಟಿ ಸದಸ್ಯರ ಉಪಸ್ಥಿತಿಯಲ್ಲಿ ಹೊಸ ರೋವರ್-ರೇಂಜರ್ ಘಟಕ ಪ್ರಾರಂಭಕ್ಕೆ ಚಾಲನೆ ನೀಡಲಾಯಿತು.

* ಸೆಪ್ಟಂಬರ್ 12 ರಂದು ಮಧುಗಿರಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೀಜಾವರ, ಒಡೆರಹಳ್ಳಿ ಕಿರಿಯ ಪ್ರಾಥಮಿಕ ಶಾಲೆ, ಸಿದ್ದಾಪುರ ಜಿ.ಎಚ್.ಪಿ.ಎಸ್. ಶಾಲೆ ಹಾಗೂ ಪಿ.ಎಮ್. ಹಿರಿಯ ಪ್ರಾಥಮಿಕ ಮಾಡೆಲ್ ಶಾಲೆ, ಕೆ.ಆರ್. ಎಕ್ಸ್ಟೆಂಶನ್ ಪ್ರೌಢಶಾಲೆ, ಸರ್ಕಾರಿ ಜೂನಿಯರ್ ಕಾಲೇಜ್, ಸರ್ಕಾರಿ ಬಾಲಕಿಯರ ಜೂನಿಯರ್ ಕಾಲೇಜ್, ಸರ್ಕಾರಿ ಜೂನಿಯರ್ ಕಾಲೇಜ್, ಪ್ರೌಢಶಾಲೆ, ಶಾಲೆ, ಮತ್ತು ಜುಪಿಟರ್ ಶಾಲೆ, ಚೇತನ ಶಾಲೆ. ಈ ಶಾಲೆಗಳಿಗೆ ಶ್ರೀಮತಿ ಉಮಾ ಮಲ್ಲೇಶ್, ಜಿಲ್ಲಾ ಕೋಶಾಧಿಕಾರಿ ಇವರು ಕೂಡ ಕೆಲವು ಶಾಲೆಗಳಿಗೆ ಎ.ಎಸ್.ಓ.ಸಿ. ಶ್ರೀ ಕರಿಸಿದ್ದಪ್ಪ ಇವರ ಜೊತೆಯಲ್ಲಿ ಭೇಟಿ ನೀಡಿದರು. ಇನ್ನುಳಿದ ಶಾಲೆಗಳಿಗೆ ಎ.ಎಸ್.ಓ.ಸಿ. ಭೇಟಿ ನೀಡಿ ದಳ ರಚಿಸುವ ಬಗ್ಗೆ ಮಾಹಿತಿ ನೀಡಿ ಮತ್ತು ದಳ ನೋಂದಣಿ ಪಡೆದು ಬರಲಾಯಿತು.

* ಅಕ್ಟೋಬರ್ 8 ರಂದು ಶಿರಾ ರೋವರ್-ರೇಂಜರ್ ವಿದ್ಯಾರ್ಥಿಗಳಿಗೆ ಪ್ರಾರಂಭಿಕ ಮಾಹಿತಿಯನ್ನು ನೀಡಲಾಯಿತು.

* ಅಕ್ಟೋಬರ್ 10 ರಂದು ಮಧುಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ರೋವರ್ಸ್‌ಗಳಿಗೆ ಪ್ರವೇಶದ ಮಾಹಿತಿ ನೀಡಲಾಯಿತು. ನಂತರ ನಗರದ ಪೊಲೀಸ್ ಅಧಿಕಾರಿಯವರಾದ ಶ್ರೀ ವಿಜಯ ಕುಮಾರ ಕಾನೂನು ಮಾಹಿತಿ ನೀಡಿದರು. ಪುರಾತತ್ವ ಇಲಾಖೆ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಿ ವನವಿದ್ಯಾ ಸಂಕೇತದಿಂದ ಹೊರ ಸಂಚಾರ ಮಾಡಲಾಯಿತು. ಇಲ್ಲಿನ ಅನಾಥ ಸೇವಾಶ್ರಮದಲ್ಲಿ ಇರುವ ವಯಸ್ಕರುಗಳಿಗೆ ಹಣ್ಣು ವಿತರಿಸಿ ಅವರ ಆರೋಗ್ಯ ವಿಚಾರಿಸಿ ಮಕ್ಕಳಿಗೆ ಅವರ ಪರಿಚಯ ಮಾಡಿಸಿ ಅವರ ಕಷ್ಟ ನೋವು ತೊಂದರೆಗಳ ಬಗ್ಗೆ ಮಾಹಿತಿಯನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ 68 ರೋವರ್-ರೇಂಜರ್‌ಗಳು ಭಾಗವಹಿಸಿದ್ದರು. ಶ್ರೀ ದರ್ಶನ್ ಲೀಡರ್ ಶ್ರೀಮತಿ ವೇದಲಕ್ಷ್ಮಿ ಮತ್ತು ಶ್ರೀ ಕರಿಸಿದ್ದಪ್ಪ ಎಎಸ್‌ಓಸಿ ಹಾಗೂ ಹಿರಿಯ ರೋವರ್-ರೇಂಜರ್‌ಗಳು ಉಪಸ್ಥಿತರಿದ್ದರು.

* ಅಕ್ಟೋಬರ್ 14 ಮಧುಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೂತನವಾಗಿ ಸೇರ್ಪಡೆಗೊಂಡ ರೋವರ್-ರೇಂಜರ್‌ಗಳಿಗೆ ಒಂದು ದಿನದ ಮಾಹಿತಿ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಗಾರದ ಅಧ್ಯಕ್ಷತೆಯನ್ನು ಪ್ರೊಫೆಸರ್ ಶ್ರೀ ಕುಮಾರ್, ಪ್ರಾಂಶುಪಾಲರು ವಹಿಸಿದ್ದರು. ನಾಯಕರಾಗಿ ಶ್ರೀ ಚಂದ್ರಶೇಖರ್ ಹಾಗೂ ಸಹಾಯಕರಾಗಿ ಶ್ರೀ ಕೃಷ್ಣಮೂರ್ತಿ, ಡಿಟಿಸಿ ಸ್ಕೌಟ್ ಹಾಗೂ ರೋವರ್ ಲೀಡರ್ ಶ್ರೀ ದರ್ಶನ್, ಲೀಡರ್, ಶ್ರೀಮತಿ ವೇದಲಕ್ಷ್ಮಿ ಉಪನ್ಯಾಸಕರು ಉಪಸ್ಥಿತರಿದ್ದರು. 78 ರೋವರ್-ರೇಂಜರ್‌ಗಳು ಪಾಲ್ಗೊಂಡಿದ್ದರು.

## ರಾಯಚೂರು

* ಸೆಪ್ಟೆಂಬರ್ 17 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಅಂಗವಾಗಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಸ್ಕೌಟ್ ಭವನ, ರಾಯಚೂರು ಇಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಹನುಮಂತಪ್ಪ ಗವಾಯಿ, ನಿವೃತ್ತಿ ಜಿಲ್ಲಾ ಶಿಕ್ಷಣಾಧಿಕಾರಿಗಳು ರಾಯಚೂರು, ಶ್ರೀ ಬಸವರಾಜ ಗದಗಿನ, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಬಸಪ್ಪ ಗದ್ದಿ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ., ರೋವರ್ಸ್ ಸೋಮಶೇಖರ, ಕಿರಣ್ ಕುಮಾರ್ ರವರು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 17 ರಂದು ಜಿಲ್ಲಾಡಳಿತ ರಾಯಚೂರು ವತಿಯಿಂದ ಸನ್ಮಾನ್ಯ ಡಾ. ಶರಣಪ್ರಕಾಶ್ ಆರ್. ಪಾಟೀಲ್, ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು, ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿದರು. ತದನಂತರ ವಿವಿಧ ಶಾಲೆಗಳಿಂದ ಪಥಸಂಚಲವನ್ನು ಆಯೋಜನೆ ಮಾಡಲಾಯಿತು. ಈ ಪಥಸಂಚಲನದಲ್ಲಿ ಸೇಂಟ್ ಮೇರಿ ಕಾನ್ವೆಂಟ್ ಶಾಲೆ ರಾಯಚೂರು ಗೈಡ್ ತಂಡ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೊಲೀಸ್ ಕಾಲೋನಿ ರಾಯಚೂರು ಗೈಡ್ ತಂಡ, ಸರ್ಕಾರಿ ಬಾಲಕರ ಪ್ರೌಢ ಶಾಲೆ ರಾಯಚೂರು ಸ್ಕೌಟ್ ತಂಡಗಳು ಭಾಗವಹಿಸಿದ್ದವು. ಮಾನ್ಯ ಸಚಿವರು ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ಇದೇ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಎನ್.ಎಸ್. ಬೋಸರಾಜು, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಅಧ್ಯಕ್ಷರು ಜಿಲ್ಲಾ ಸಂಸ್ಥೆ ರಾಯಚೂರು, ಸನ್ಮಾನ್ಯ ಶ್ರೀ ವಸಂತ ಕುಮಾರ್, ವಿಧಾನ ಪರಿಷತ್ ಸದಸ್ಯರು, ಸನ್ಮಾನ್ಯ ಶ್ರೀ ಡಾ. ಶಿವರಾಜಪಾಟೀಲ್ ಶಾಸಕರು ರಾಯಚೂರು ನಗರ, ಸನ್ಮಾನ್ಯ ಶ್ರೀ ದದ್ದಲ ಬಸನಗೌಡ ಶಾಸಕರು ರಾಯಚೂರು ಗ್ರಾಮೀಣರವರು ಉಪಸ್ಥಿತರಿದ್ದರು.




* ಸೆಪ್ಟೆಮಬರ್ 10 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು ರೇಸ್ ಚಾಣುಕ್ಯ ಶಾಲೆ ರಾಯಚೂರು ಇವರುಗಳ ಸಂಯುಕ್ತಾಶ್ರಮದಲ್ಲಿ ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರವರ 77ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು, ಶ್ರೀಮತಿ ಪರಿಮಳಾ ರೆಡ್ಡಿ ಮುಖ್ಯ ಗುರುಗಳು, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ. ಶ್ರೀಮತಿ ಸೌಭಾಗ್ಯ ಲಕ್ಷ್ಮಿ ಗೈಡ್ ಕ್ಯಾಪ್ಟನ್ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು, ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 25 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಹಾಗೂ ಬಿ.ಆರ್.ವಿ. ಪದವಿಪೂರ್ವ ಕಾಲೇಜು ರಾಯಚೂರು ಇವರುಗಳ ಸಂಯುಕ್ತಾಶ್ರಮದಲ್ಲಿ ಶ್ರೀ ಸಂದೀಪ್, ಪ್ರಾಂಶುಪಾಲರು ಇವರ ಅಧ್ಯಕ್ಷತೆಯಲ್ಲಿ ರೋವರಿಂಗ್– ರೇಂಜರಿಂಗ್ ಹಾಗೂ ಯುವ ಆಪದ್ ಮಿತ್ರ ತರಬೇತಿ ಶಿಬಿರದ ಒಂದು ದಿನದ ಕಾರ್ಯಾಗಾರವನ್ನು ಆಯೋಜನೆ ಮಾಡಲಾಯಿತು. ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಶೇಖರ್ ಇವರು ಆಗಮಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಅಂಬಣ್ಣ ನಾಯಕ ಜಿಲ್ಲಾ ಸಂಘಟಕರು ಅವರು ರೋವರಿಂಗ್–ರೇಂಜರಿಂಗ್ ಹಾಗೂ ಯುವ ಆಪದ್ ಮಿತ್ರ ತರಬೇತಿ ಶಿಬಿರದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಶ್ರೀ ಗೋವಿಂದಪ್ಪ ರೋವರ್ ಸ್ಕೌಟ್ ಲೀಡರ್. ಡಾ. ತಾಯಮ್ಮ ರೇಂಜರ್ ಲೀಡರ್ಸ್ ಹಾಗೂ ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 25 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು ವಿಜ್ಞಾನ ಡಿ.ಜಿ. ಸಿ.ಬಿ.ಎಸ್.ಇ. ಶಾಲೆ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಕಬ್–ಬುಲ್‌ಬುಲ್ ಘಟಕಗಳ ಉದ್ಘಾಟನಾ ಸಮಾರಂಭವನ್ನು ಶ್ರೀ ಎಂ. ವೆಂಕಟೇಶ ಶಾಲೆಯ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಆರ್.ಎಚ್. ಸಾಗರ್‌ರವರು ಸಸಿಗೆ ನೀರು ಹಾಕುವ ಮೂಲಕ ಘಟಕಗಳನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್. ಶೇಖರ್, ಕಾರ್ಯದರ್ಶಿ, ಶ್ರೀ ಸುರೇಶ್ ಬಾಬು, ಶ್ರೀ ಅಂಬಣ್ಣ ನಾಯಕ್, ಜಿಲ್ಲಾ ಸಂಘಟಕರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀಮತಿ ವಿನಯ್ ಕೆ.ಎಂ. ಪ್ರಾಂಶುಪಾಲರು, ಶ್ರೀಮತಿ ಸೀಮಾ ಬೇಗಂ ಮುಖ್ಯ ಗುರುಗಳು ಶ್ರೀಮತಿ ರೇಣುಕಾ ಫ್ಲಾಕ್ ಲೀಡರ್, ಶಾಲೆಯ ಸಿಬ್ಬಂದಿ ವರ್ಗದವು, ಕಬ್–ಬುಲ್‌ಬುಲ್ಸ್‌ಗಳು ಭಾಗವಹಿಸಿದ್ದರು.



* ಅಕ್ಟೋಬರ್ 07 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಆದಿವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಜಿಲ್ಲಾ ಸ್ಕೌಟ್ಸ್ ಭವನ ರಾಯಚೂರು ಇಲ್ಲಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಹನುಮಂತಪ್ಪ ಗವಾಯಿ, ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿಗಳು, ರಾಯಚೂರು. ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು, ಶ್ರೀ ನಬಿಚಂದ್, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ.ರವರು ಉಪಸ್ಥಿತರಿದ್ದರು.



## ಶಿವಮೊಗ್ಗ

* "ಗಾಂಧೀ ಅವರ ಸತ್ಯ ಮತ್ತು ಅಹಿಂಸೆಯ ಸಿದ್ಧಾಂತವು ಇಂದಿಗೂ ಪ್ರಸ್ತುತ" ಎಂದು ಜಿಲ್ಲಾ ಪ್ರಧಾನ ಆಯುಕ್ತೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಹೇಳಿದರು. ಜಿಲ್ಲಾ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಜಿಲ್ಲಾ ಆಯುಕ್ತ ಶ್ರೀ ಜಿ. ವಿಜಯಕುಮಾರ್ ಮಾತನಾಡಿ "ಮಹಾತ್ಮ ಗಾಂಧಿ ಅವರ ಬೋಧನೆಗಳು ಪ್ರಪಂಚದಾದ್ಯಂತ ಜನರೊಂದಿಗೆ ಪ್ರತಿಧ್ವನಿಸುತ್ತವೆ. ಅವರನ್ನು ಶಾಂತಿ ಮತ್ತು ಮಾನವೀಯ ಸಂಕೇತವನ್ನಾಗಿ ಮಾಡುತ್ತವೆ" ಎಂದರು. ಶಿವಮೊಗ್ಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಖಜಾಂಚಿ ಶ್ರೀ ಆರ್. ಮನೋಹರ ಮಾತನಾಡಿ, "ಮಹಾತ್ಮ ಗಾಂಧಿಯವರ ಜಯಂತಿಯನ್ನು ವಿಶ್ವ ಸಂಸ್ಥೆಯ ಜಾಗತಿಕವಾಗಿ ಅಂತರ ರಾಷ್ಟ್ರೀಯ ಅಹಿಂಸಾ ದಿನವಾಗಿ ಆಚರಿಸುತ್ತದೆ" ಎಂದು ಹೇಳಿದರು. ಗೈಡ್ ಆಯುಕ್ತೆ ಶ್ರೀಮತಿ ಎಸ್.ಕೆ. ಲಕ್ಷ್ಮೀ ಮಾತನಾಡಿ, "ಸ್ವಾತಂತ್ರ್ಯ ಚಳವಳಿಗೆಗೆ ಸ್ಫೂರ್ತಿ ನೀಡಿದ ನಾಯಕ ಮಹಾತ್ಮಗಾಂಧಿ ಅವರ ತ್ಯಾಗವನ್ನು ಸ್ಮರಿಸಲು ಮತ್ತು ಅವರ ಸತ್ಯ, ಶಾಂತಿ ಮತ್ತು ಸರಳತೆಯ ಬೋಧನೆಗಳ ಮೂಲಕ ಬದುಕಲು ಜನರನ್ನು ಪ್ರೇರೇಪಿಸಲು ಈ ದಿನ ಸಮರ್ಪಿಸಲಾಗಿದೆ" ಎಂದು ತಿಳಿಸಿದರು. ಆಯುಕ್ತ ಶ್ರೀ ಕೆ. ರವಿ ಮಾತನಾಡಿ, "ಮಹಾತ್ಮ ಗಾಂಧಿ ಅವರ ಮಾರ್ಗದರ್ಶಿತತ್ವಗಳು ಮತ್ತು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿತು" ಎಂದರು. ಜಿಲ್ಲಾ ಸಂಸ್ಥೆ ಖಜಾಂಚಿ ಶ್ರೀಮತಿ ಚೂಡಾಮಣಿ ಇ. ಪವಾರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಚಂದ್ರಶೇಖರಯ್ಯ ಕೆ.ವಿ.. ದಂಟಿ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ ಮಕ್ಕಳು ಉಪಸ್ಥಿತರಿದ್ದರು.





* ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ವತಿಯಿಂದ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಅಕ್ಟೋಬರ್ 01 ರಂದು ಆಯುಧ ಪೂಜೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಚಂದ್ರಶೇಖರಯ್ಯ ಕೆ.ವಿ., ರೋವರ್ ವಿಭಾಗದ ಜಿಲ್ಲಾ ಆಯುಕ್ತರಾದ ಶ್ರೀ ಕೆ. ರವಿ., ಶ್ರೀ ರಾಜೇಶ್ ಎ.ವಿ., ಎಲ್.ಟಿ.(ರೋವರ್) ಕಛೇರಿ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.



* ಅಕ್ಟೋಬರ್ 14 ರಂದು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಏರ್ಪಟ್ಟ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಒಂದು ದಿನದ ಮಾಹಿತಿ ಶಿಬಿರವನ್ನು ಯಶಸ್ವಿಯಾಗಿ ನಿರ್ವಹಿಸುವುದರಲ್ಲಿ ಮೊಟ್ಟಮೊದಲ ಬಾರಿಗೆ ಘೋಷಿಸಲಾದ "2024–25ನೇ ಸಾಲಿನ ಅತ್ಯುತ್ತಮ ರೋವರ್ಸ್ ಮತ್ತು ರೇಂಜರ್ಸ್ ಘಟಕ ಪ್ರಶಸ್ತಿ"ಯನ್ನು ಎನ್.ಇ.ಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಶಿವಮೊಗ್ಗ ಕಾಲೇಜು ತನ್ನ ಮುಡಿಗೇರಿಸಿಕೊಂಡಿತು. ರೋವರ್ಸ್ ಮತ್ತು ರೇಂಜರ್ಸ್ ಮಾಹಿತಿ ಶಿಬಿರದ ಉದ್ಘಾಟನಾ ಸಮಾರಂಭವು ವಿಶ್ವವಿದ್ಯಾಲಯದ ಕುಲಸಚಿವರಾದ ಶ್ರೀ ಎ.ಎಲ್. ಮಂಜುನಾಥ್ ಅವರಿಂದ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷರಾದ ಡಾ. ರವೀಂದ್ರ ಗೌಡ ಎಸ್.ಎಂ., ನೋಡಲ್ ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಪ್ರಶಸ್ತಿಯು ವಿದ್ಯಾರ್ಥಿಗಳ ತ್ಯಾಗ, ಶ್ರಮ ಮತ್ತು ನಾಯಕತ್ವದ ಪರಿಪೂರ್ಣ ಪ್ರತಿಫಲ ಎಂದು ಹೇಳಿದರು. ಮುಖ್ಯ ಅತಿಥಿಗಳಾದ ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಮುಖ್ಯ ಕಾರ್ಯದರ್ಶಿಗಳು ಹಾಗೂ ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಮುಖ್ಯ ಆಯುಕ್ತರು, ಶಿವಮೊಗ್ಗ, ಶ್ರೀಮತಿ ಡಿ.ಎಸ್. ಮಮತಾ, ವಕೀಲರು, ಜಿಲ್ಲಾ ಅಧಿಕಾರಿಗಳು (ಗೈಡ್ಸ್), ಚಿಕ್ಕಮಗಳೂರು ಇವರು ಮತ್ತು ಸಂಪನ್ಮೂಲ ವ್ಯಕ್ತಿಯಾದ ಶ್ರೀ ರಾಜೇಶ್ ಅವಲಕ್ಕಿ ಮತ್ತು ಶ್ರೀ ಗಣಪತಿ ಅವರು ಶಿಬಿರದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳು, ಸಂಘಟನಾ ಕಾರ್ಯದರ್ಶಿಗಳು, ಪದಾಧಿಕಾರಿಗಳು, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರು, ವಿವಿಧ ಕಾಲೇಜಿನ ಪ್ರಾಂಶುಪಾಲರು, ರೋವರ್ಸ್ ಸ್ಕೌಟ್ಸ್ ಲೀಡರ್ ಮತ್ತು ರೇಂಜರ್ಸ್ ಲೀಡರ್ ಹಾಗೂ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.



## ವಿಜಯಪುರ

ವಿಜಯಪುರ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್‌ನ ಬುರಣಾಪುರ ಜಿಲ್ಲಾ ತರಬೇತಿ ಕೇಂದ್ರದ ಸಮಗ್ರ ಅಭಿವೃದ್ಧಿಗೆ ಆರ್ಥಿಕ ನೆರವು ಒದಗಿಸುವಂತೆ ಕೋರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಂ.ಬಿ ಪಾಟೀಲ ಅವರನ್ನು ಅಕ್ಟೋಬರ್ 26 ರಂದು ಸ್ಕೌಟ್ಸ್ ಗೈಡ್ಸ್ ಜಿಲ್ಲಾ ನಿಯೋಗ ಭೇಟಿ ನೀಡಿ ಮನವಿ ಸಲ್ಲಿಸಲಾಯಿತು. ಬುರಣಾಪುರದ ಜಿಲ್ಲಾ ಸ್ಕೌಟ್ಸ್ ಗೈಡ್ಸ್ ತರಬೇತಿ ಕೇಂದ್ರವು ಕೇವಲ ಜಿಲ್ಲೆಗೆ ಮಾತ್ರ ಸೀಮಿತವಾಗಿರದೆ ಸಮಗ್ರ ಉತ್ತರ ಕರ್ನಾಟಕ ಭಾಗದ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಉಪಯೋಗವಾಗುತ್ತಿದ್ದು ಇದನ್ನು ಸಕಲ ಮೂಲಭೂತ ಸೌಲಭ್ಯಗಳೊಂದಿಗೆ ಸುಸಜ್ಜಿತಗೊಳಿಸಲು ಆರ್ಥಿಕ ನೆರವು ಬೇಕಿದ್ದು ಅದನ್ನು ಒದಗಿಸಿ ಕೊಡಲು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಸಕ್ರಿ ಅವರು ಮನವಿ ಸಲ್ಲಿಸುವ ಮೂಲಕ ಸಚಿವರಲ್ಲಿ ವಿನಂತಿಸಿಕೊಂಡರು. ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಐ.ಎಸ್. ಕಾಳಪ್ಪನವರ, ಶ್ರೀ ಸುರೇಶ ಶಡಶಾಳ, ಜಿಲ್ಲಾ ಆಯುಕ್ತರಾದ ಶ್ರೀ ಬಿ.ಎಂ. ಆಜೂರ ಮತ್ತಿತರರು ಪಾಲ್ಗೊಂಡಿದ್ದರು.



## ಉಡುಪಿ

* ಮಾನ್ಯ ಜಿಲ್ಲಾಧಿಕಾರಿಯವರಾದ ಶ್ರೀಮತಿ ಸ್ವರೂಪ ಟಿ.ಕೆ ಇವರು ಡಾ. ವಿ.ಎಸ್. ಆಚಾರ್ಯ, ಜಿಲ್ಲಾ ತರಬೇತಿ ಕೇಂದ್ರಕ್ಕೆ ಭೇಟಿಕೊಟ್ಟು ತರಬೇತಿ ಕೇಂದ್ರವನ್ನು ವೀಕ್ಷಿಸಿ, ಪ್ರಗತಿಯ ಬಗ್ಗೆ ಮಾಹಿತಿಯನ್ನು ಪಡೆದು ಸಲಹೆ ಸೂಚನೆ ನೀಡಿದರು. ಹಾಗೂ ಜಿಲ್ಲಾ ತರಬೇತಿ ಕೇಂದ್ರದ ಪ್ರಕೃತಿಯನ್ನು ವೀಕ್ಷಿಸಿ ಸಂತೋಷ ಪಟ್ಟರು.



* ಸೆಪ್ಟೆಂಬರ್ 22 ರಂದು ಉಡುಪಿ ಜಿಲ್ಲೆ ಉಚ್ಚಿಲದಲ್ಲಿ ನಡೆದ ದಸರಾ ಹಬ್ಬದ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ ರೋವರ್–ರೇಂಜರ್ಸ್‌ಗಳು ಭಾಗವಹಿಇದ್ದರು.







## ವಿಜಯನಗರ

* "ಭವಿಷ್ಯದ ಪೀಳಿಗೆಗಾಗಿ ಹಸಿರೀಕರಣಕ್ಕೆ ಆದ್ಯತೆ ನೀಡಿ ಊರಿಗೊಂದು ಕೆರೆ, ಮನೆಗೊಂದು ಮರ ಎಂಬ ಪರಿಕಲ್ಪನೆಯಲ್ಲಿ ಪ್ರತಿಯೊಬ್ಬರು ಮನೆಗಳ ಮುಂದೆ ಮರ ಬೆಳೆಸಲು ನೀರು ಹಾಕಿ ಪೋಷಣೆ ಮಾಡುವ ಸಂಕಲ್ಪ ಮಾಡಬೇಕಿದೆ" ಎಂದು ಅರಣ್ಯ ಮತ್ತು ಪರಿಸರ ಜೀವಿಶಾಸ್ತ್ರ ಇಲಾಖೆ ಸಚಿವರಾದ ಶ್ರೀ ಈಶ್ವರ ಖಂಡ್ರೆ ಹೇಳಿದರು. ವಿಜಯನಗರ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಿಜಯನಗರ ಹಾಗೂ ಭಾರತ್ ಸ್ಕೌಟ್ಸ್–ಗೈಡ್ಸ್ ಮತ್ತು ವಿವಿಧ ಸಂಘ ಸಂಸ್ಥೆಗಳ ಇವರ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 50 ವರ್ಷ ಪೂರೈಸಿರುವ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಕ್ರವಾರ ಅವರು ಮಾತನಾಡಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಮಾತನಾಡಿ "ಮಾಲಿನ್ಯ ಮುಕ್ತ ಕರ್ನಾಟಕ ನಿರ್ಮಾಣಕ್ಕೆ ರಾಜ್ಯ ಸರ್ಕಾರದ ಅರಣ್ಯ ಇಲಾಖೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಜಂಟಿ ಸಹಭಾಗಿತ್ವದಲ್ಲಿ ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ರಾಜ್ಯದಲ್ಲಿ ಸುವರ್ಣ ಮಹೋತ್ಸವದ ಮೂಲಕ ಜನಜಾಗೃತಿ ಮೂಡಿಸಲು 31 ಜಿಲ್ಲೆಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ" ಎಂದರು. ಇದೇ ವೇಳೆ ವಿಜಯನಗರ ಸಂಘದ ಶ್ರೀ ಈ. ತುಕಾರಾಮ್ ಅವರು ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ಸಮಾಜವನ್ನು ನಿರ್ಮಾಣಗೊಳಿಸಲು ಸಿ.ಎಸ್.ಆರ್. ಅನುದಾನದಡಿಯಲ್ಲಿ ಸುಮಾರು 8,000 ಬಟ್ಟೆ ಬ್ಯಾಗ್‌ಗಳನ್ನು ತಯಾರಿಸಿ ಉಚಿತವಾಗಿ ಸಾರ್ವಜನಿಕರಿಗೆ ವಿತರಿಸುವ ಕಾರ್ಯಕ್ಕೆ ಸಾಂಕೇತಿಕವಾಗಿ ವೇದಿಕೆಯಲ್ಲಿ ಚಾಲನೆ ನೀಡಿದರು. ಕೊಪ್ಪಳ ಸಂಸದ ಶ್ರೀ ಕೆ. ರಾಜಶೇಖರ್ ಬಸವರಾಜ ಹಿಟ್ನಾಳ್ ಮಾತನಾಡಿದರು. ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೊಸಪೇಟೆ ಶಾಸಕ ಶ್ರೀ ಹೆಚ್.ಆರ್. ಗವಿಯಪ್ಪರವರು ವಹಿಸಿದ್ದರು. ವೇದಿಕೆಯಲ್ಲಿ ಕೂಡ್ಲಿಗೆ ಶಾಸಕ ಡಾ. ಎನ್.ಟಿ. ಶ್ರೀನಿವಾಸ್, ಹೂವಿನಹಡಗಲಿ ಶಾಸಕ ಶ್ರೀ ಎಲ್. ಕೃಷ್ಣನಾಯಕ್, ಹೊಸಪೇಟೆ ನಗರ ಸಭೆ ಅಧ್ಯಕ್ಷ ಶ್ರೀ ಎನ್. ರೂಪೇಶ್‌ಕುಮಾರ್, ಕೊಪ್ಪಳ ನಗರಸಭೆ ಅಧ್ಯಕ್ಷ ಶ್ರೀ ಅಮ್ಜದ್ ಪಟೇಲ್, ಸೇರಿದಂತೆ, ಅನೇಕ ಜನ ನಾಯಕರು, ಅಧಿಕಾರಿಗಳು, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಉಪಸ್ಥಿತರಿದ್ದರು.






**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಅಧಿಕೃತ ನೂತನ ಜಾಲತಾಣವನ್ನು ಪ್ರಾರಂಭಿಸಲಾಗಿದೆ.**

**ತಾವುಗಳು ರಾಜ್ಯ ಸಂಸ್ಥೆಯ ಎಲ್ಲಾ ಕಾರ್ಯಕ್ರಮಗಳು, ಚಟುವಟಿಕೆಗಳು, ಶಿಬಿರಗಳು, ಪರೀಕ್ಷೆಗಳ ಬಗ್ಗೆ ಮಾಹಿತಿಗಾಗಿ https://www.bsgkarnataka.in ಜಾಲತಾಣಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲು ತಮ್ಮಲ್ಲಿ ಕೋರುತ್ತೇವೆ.**

# ಶ್ರದ್ಧಾಂಜಲಿ



**ಶ್ರೀ ಎಸ್. ಮರುಳಸಿದ್ದಯ್ಯರವರು,** ಸಂಸ್ಥಾಪಕ ಕಾರ್ಯದರ್ಶಿಗಳು, ವಿಶ್ವಬಂಧು ಅಭಿವೃದ್ಧಿ ಪ್ರತಿಷ್ಠಾನ ಹಾಗೂ ಸ್ವಾಮಿ ವಿವೇಕಾನಂದ ಶಾಲೆಗಳು, ದಾವಣಗೆರೆ ಇವರು ದಿನಾಂಕ 14 ಅಕ್ಟೋಬರ್ 2025ರಂದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಅವರು ರಾಜ್ಯ ಸಂಸ್ಥೆಯ ಆಜೀವ ಸದಸ್ಯರಾಗಿ ಹಾಗೂ ಕೊಂಡಜ್ಜಿ ತರಬೇತಿ ಕೇಂದ್ರದ ಅಭಿವೃದ್ಧಿ ಸಮಿತಿ ಸದಸ್ಯರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. ರಾಜ್ಯ ಮುಖ್ಯ ಆಯುಕ್ತರಾಗಿದ್ದ ದಿ. ಕೊಂಡಜ್ಜಿ ಬಸಪ್ಪ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಹಾಗು ಶ್ರೀ ಕೊಂಡಜ್ಜಿ ಷಣ್ಮುಖಪ್ಪ ಅವರಿಗೂ ಆತ್ಮೀಯ ಸ್ನೇಹಿತರಾಗಿದ್ದರು. ಅವರು ತಮ್ಮ ಧರ್ಮಪತ್ನಿ, ಮಗಳು, ಮಗ ಹಾಗೂ ಅಪಾರ ಬಂಧು ಬಳಗ ಹಾಗೂ ತಾವು ಸ್ಥಾಪಿಸಿದ ಸಂಸ್ಥೆಗಳ ನೌಕರರನ್ನು ಅಗಲಿದ್ದಾರೆ.



**ಶ್ರೀ ಎ.ಎಸ್. ಶಿವಕುಮಾರ್,** ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ನಿವೃತ್ತ) ಇವರು ಭಾರತ್ ಸ್ಕೌಟ್ಸ್–ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯಲ್ಲಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾಗಿ ವಿವಿಧ ಜಿಲ್ಲೆಗಳಲ್ಲಿ ಸೇವೆಯನ್ನು ಸಲ್ಲಿಸಿ ಇದೇ ಮೇ 31, 2025 ರಂದು ನಿವೃತ್ತರಾಗಿದ್ದರು. ಇವರು ದಿನಾಂಕ 25.10.2025ರ ಶನಿವಾರದಂದು ಹೃದಯಾಘಾತದಿಂದ ದೈವಾಧೀನರಾಗಿರುತ್ತಾರೆ. ಇವರು ಕೊಂಡಜ್ಜಿ ತರಬೇತಿ ಕೇಂದ್ರದಲ್ಲಿ ವಾರ್ಡ್‌ನ್ ಆಗಿ ಸುಮಾರು ವರ್ಷಗಳು ಸೇವೆ ಸಲ್ಲಿಸಿದ್ದರು ಹಾಗೂ ಇವರ ತಂದೆಯವರಾದ ಶ್ರೀ ಎ. ಸಿದ್ರಾಮಪ್ಪ ಅವರು ನಮ್ಮ ಸಂಸ್ಥೆಯಲ್ಲಿ ಎ.ಎಸ್.ಓ.ಸಿ ಆಗಿ ಸೇವೆ ಸಲ್ಲಿಸಿದ್ದರು. ಇವರು ತಮ್ಮ ಧರ್ಮಪತ್ನಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



ದಿನಾಂಕ 25–10–2025 ಶನಿವಾರದಂದು ಬಾಪೂಜಿ ಆಂಗ್ಲ ಮಾಧ್ಯಮ ಶಾಲೆ, ದಾವಣಗೆರೆಯ ಕಬ್ ಮಾಸ್ಟರ್ ಆಗಿದ್ದ **ಶ್ರೀ ಎಂ. ಮಂಜುನಾಥ್** ಹೃದಯಘಾತದಿಂದ ನಿಧನರಾದರು. ಇವರು ಕಬ್ ವಿಭಾಗದಲ್ಲಿ ಮೂಲ ತರಬೇತಿಯನ್ನು ಪಡೆದಿದ್ದರು. ಇವರಿಗೆ 30 ವರ್ಷ ವಯಸ್ಸಾಗಿತ್ತು. ಇವರು ತಮ್ಮ ಸಹೋದರ, ಸಹೋದರಿ ಮತ್ತು ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರುಗಳ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

ಅರಣ್ಯ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಹಾಗೂ
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ದೀಪದಿಂದ ದೀಪ ಹಚ್ಚಿ

# ದೀಪಾವಳಿ

ಹಬ್ಬವನ್ನು ಆಚರಿಸೋಣ

ನಾಡಿನ ಸಮಸ್ತ ಜನತೆಗೆ
ದೀಪಾವಳಿ ಹಬ್ಬದ ಶುಭಾಶಯಗಳು



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು



ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು



ಈ ದೀಪಾವಳಿಯಂದು ದೀಪಗಳನ್ನು ಬೆಳಗುವ ಮೂಲಕ ಸುರಕ್ಷಿತ ಹಾಗೂ ಪರಿಸರ ಸ್ನೇಹಿ ಹಬ್ಬವನ್ನು ಆಚರಿಸೋಣ.
ದೀಪಾವಳಿಯು ಬೆಳಕಿನ ಹಬ್ಬ, ವಾಯು ಮತ್ತು ಶಬ್ದ ಮಾಲಿನ್ಯವನ್ನು ತಡೆಗಟ್ಟೋಣ.

**ಘನ ಸರ್ವೋಚ್ಚ ನ್ಯಾಯಾಲಯದ 31.10.2010 ಮತ್ತು 23.10.2018ರ ನಿರ್ದೇಶನದಂತೆ**

- ಶಬ್ದ, ವಾಯುಮಾಲಿನ್ಯ ಉಂಟುಮಾಡುವ ನಿಷೇಧಿತ ಪಟಾಕಿ ಬಳಕೆ ಬೇಡ.
- 110 ಡೆಸಿಬಲ್‌ಗಳಿಗಿಂತ ಹೆಚ್ಚಿನ ಶಬ್ದ ಮಾಡುವ ಪಟಾಕಿ ನಿಷೇಧಿಸಿದೆ.
- ಬೆಳಿಗ್ಗೆ 6.00 ಗಂಟೆಯಿಂದ 7.00 ಗಂಟೆಯವರೆಗೆ ಹಾಗೂ ರಾತ್ರಿ 8.00 ಗಂಟೆಯಿಂದ 10.00 ಗಂಟೆವರೆಗೆ ಎರಡು ದಿನಗಳು ಮಾತ್ರ ಪಟಾಕಿ ಸಿಡಿಸಲು ಅವಕಾಶ.
- ಹಸಿರು ಪಟಾಕಿಗಳನ್ನು ಬಳಸುವುದಕಷ್ಟೇ ಅವಕಾಶ.
- PESO ಮತ್ತು NEERI ಸಂಸ್ಥೆಯಿಂದ ಮಾನ್ಯತೆ ಪಡೆದ ಹಸಿರು ಪಟಾಕಿಗಳನ್ನು ಬಳಸುವುದಕ್ಕೆ ಅವಕಾಶವಿದೆ.



ರಾಸಾಯನಿಕ ಮತ್ತು ಲೋಹಯುಕ್ತ
ಪಟಾಕಿ
ಆರೋಗ್ಯಕ್ಕೆ ಹಾನಿಕಾರಕ

ಪ್ರಕೃತಿ ಪರಿಸರ ಉಳಿಸಿ
ಜೀವ ಸಂಕುಲಕ್ಕೆ ಆಗುವ ಅಪಾಯ ತಪ್ಪಿಸಿ



ಶ್ರೀ ಈಶ್ವರ್ ಬಿ. ಖಂಡ್ರೆ
ಮಾನ್ಯ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು
ಇವರು ವಿಶ್ವಪರಿಸರ ದಿನಾಚರಣೆಯಲ್ಲಿ ಭಾಗವಹಿಸಿರುವುದು.



ದೀಪಾವಳಿಯಲ್ಲಿ ಹಣತೆ ಬೆಳಗಲಿ
ಪಟಾಕಿಗಳು ದೂರವೇ ಇರಲಿ



ಶ್ರೀ ಪಿ. ಎಂ. ನರೇಂದ್ರಸ್ವಾಮಿ
ಮಾನ್ಯ ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಇವರು ವಿಶ್ವಪರಿಸರ ದಿನಾಚರಣೆಯಲ್ಲಿ ಭಾಗವಹಿಸಿರುವುದು.

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**
# 49, "ಪರಿಸರ ಭವನ" 1 ರಿಂದ 5ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001
ದೂರವಾಣಿ: 25581383, 25589112, 25586520, ಫ್ಯಾಕ್ಸ್: 080-25586321
ಇ-ಮೇಲ್: ho@kspcb.gov.in, ವೆಬ್‌ಸೈಟ್: https://kspcb.karnataka.gov.in

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 32)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26